RNI: KARKAN\2019\78042



ಸಂಪಾದಕರು : ಸಿ.ಎನ್.ಸಮಗಂಡಿ.

# ಸತ್ಯಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

Satyamithi Kannada Daily Morning

ಚನ್ನು ಮೆನ್ಸ್‌ವೇರ್
ಚನ್ನು ಸ್ಟಿಚ್‌ವರ್ಲ್ಡ್
ಜೆಂಟ್ಸ್ ಸ್ಪೇಷಲಿಸ್ಟ್ ಟೇಲರ್
ಗಜೇಂದ್ರಗಡ-582114.
ಸೆಲ್ : 9986982482, 9686165708

ಪ್ರಜಾಪ್ರಭುತ್ವ ಬಳಪಡಿಸುವಲ್ಲಿ ನಾಗರಿಕರ ಪಾತ್ರ ಮಹತ್ವದ್ದು » 2

25 ವರ್ಷಗಳ ಬಳಿಕ ಕೂಡಿದ ಗೆಳೆಯರು; ಗುರುಗಳ ಕಂಡು ಬಾವುಕರಾದರು... » 3

ಗೀತಾಂಜಲಿ ಕಿರ್ಲೋಸ್ಕರ್‌ಗೆ ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ » 4

ಸಂಪುಟ(Volume): 1 ಸಂಚಿಕೆ (Issue): 68 ● ಪುಟ (Page): 4 ● ದರ: Rs. 4 ಗುರುವಾರ 17 ಸೆಪ್ಟೆಂಬರ್ 2026 ● 17 SEPTEMBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

# ದೇಶಾದ್ಯಂತ ಬಿಜೆಪಿ ಬೃಹತ್ ಅಭಿಯಾನ, ಸಾಮಾಜಿಕ ಜಾಲತಾಣಗಳಲ್ಲಿ ವಿಶ್ವದಾಖಲೆ

**ಸತ್ಯಮಿಥ್ಯ ನ್ಯೂಸ್ ಡೆಸ್ಕ್ ನವದೆಹಲಿ:** ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ 76ನೇ ಜನ್ಮದಿನದ ಹೊಸ್ತಿಲಲ್ಲಿದ್ದು, ಈ ಐತಿಹಾಸಿಕ ಸಂದರ್ಭವನ್ನು ಸಂಭ್ರಮಿಸಲು ಭಾರತೀಯ ಜನತಾ ಪಾರ್ಟಿ ದೇಶಾದ್ಯಂತ ಬೃಹತ್ ಅಭಿಯಾನಗಳನ್ನು ಘೋಷಿಸಿದೆ. 2014 ರಿಂದ ಭಾರತವು ಪರಿವರ್ತನಾತ್ಮಕ ಬದಲಾವಣೆಗಳನ್ನು ಕಂಡಿದ್ದು, 2047 ರ ವೇಳೆಗೆ 'ವಿಕಸಿತ ಭಾರತ' ಕಟ್ಟುವತ್ತ ಹೆಜ್ಜೆ ಇಡುತ್ತಿದೆ ಎಂದು ಬಿಜೆಪಿ ಹೇಳಿದೆ.

ಈ ಸಂಭ್ರಮಾಚರಣೆಯ ಭಾಗವಾಗಿ, "ಸೆಪ್ಟೆಂಬರ್ 17 ರ ಸಾಯಂಕಾಲ 6 ಗಂಟೆಯಿಂದ ಬೆಳಿಗ್ಗೆ 7 ಗಂಟೆಯ ನಡುವೆ ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ 'ಆಶೀರ್ವಾದದ ದೀಪ' ಹಚ್ಚಿ ಪ್ರಧಾನಿಯವರನ್ನು ಹಾರೈಸಬೇಕು," ಎಂದು ನಿತಿನ್ ನವೀನ್ ವೀಡಿಯೊ ಸಂದೇಶದ ಮೂಲಕ ಮನವಿ ಮಾಡಿದ್ದಾರೆ.

**'ಡಿಜಿಟಲ್ ಜಗತ್ತಿನ ಕಿರೀಟವಿಲ್ಲದ ಸುಲ್ತಾನ':** ಮತ್ತೊಂದೆಡೆ, ಪ್ರಧಾನಿ ಮೋದಿ ಅವರು ಸಾಮಾಜಿಕ ಜಾಲತಾಣಗಳಲ್ಲಿ ಒಂದರ ಮೇಲೊಂದರಂತೆ ಜಾಗತಿಕ ದಾಖಲೆಗಳನ್ನು ಮುರಿಯುವ ಮೂಲಕ 'ಡಿಜಿಟಲ್ ಜಗತ್ತಿನ ಕಿರೀಟವಿಲ್ಲದ ಸುಲ್ತಾನ' ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

**ಯೂಟ್ಯೂಬ್ ಜಾಗತಿಕ ಮೈಲಿಗಲ್ಲು:** ಪ್ರಧಾನಿ ಮೋದಿ ಅವರ ಯೂಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬರ್ಸ್ ಸಂಖ್ಯೆ 3 ಕೋಟಿ (30 ಮಿಲಿಯನ್) ಗಡಿ ದಾಟಿದ್ದು, ಜಗತ್ತಿನ ಯಾವುದೇ ಪ್ರಭಾವಿ ನಾಯಕನಿಗಿಂತ ಬಹು ಎತ್ತರದಲ್ಲಿದ್ದಾರೆ. ಬ್ರೆಜಿಲ್‌ನ ಮಾಜಿ ಅಧ್ಯಕ್ಷ ಜೈರ್ ಬೋಲ್ಸೋನಾರೊ (ಎರಡನೇ ಸ್ಥಾನ) ಅವರ ಸಬ್‌ಸ್ಕ್ರೈಬರ್ಸ್ ಸಂಖ್ಯೆ ಮೋದಿ ಅವರ ನಾಲ್ಕನೇ ಒಂದು ಭಾಗದಷ್ಟಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗಿಂತ 7 ಪಟ್ಟು ಹೆಚ್ಚು ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗಿಂತ 3 ಪಟ್ಟು ಹೆಚ್ಚು ಯೂಟ್ಯೂಬ್ ಸಬ್‌ಸ್ಕ್ರೈಬರ್‌ಗಳನ್ನು ಅವರು ಹೊಂದಿದ್ದಾರೆ.

**ಇನ್‌ಸ್ಟಾಗ್ರಾಮ್ ದಾಖಲೆ:** ಇನ್‌ಸ್ಟಾಗ್ರಾಮ್‌ನಲ್ಲಿ 10 ಕೋಟಿ(100ಮಿಲಿಯನ್)ಫಾಲೋವರ್ಸ್‌ಹೊಂದಿದ ವಿಶ್ವದ ಮೊದಲ ರಾಜಕಾರಣಿ ಎಂಬ ಐತಿಹಾಸಿಕ ದಾಖಲೆಯನ್ನು ಪ್ರಧಾನಿ ಮೋದಿ ಬರೆದಿದ್ದಾರೆ.



**76ನೇ ಜನ್ಮದಿನದ ಹೊಸ್ತಿಲಲ್ಲಿ ಪ್ರಧಾನಿ ನರೇಂದ್ರ ಮೋದಿ**

**ಸೋಷಿಯಲ್‌ಮೀಡಿಯಾಪರ್ಫಾರ್ಮೆನ್ಸ್‌ನಲ್ಲಿ ಪ್ರಧಾನಿ ಫಸ್ಟ್:** ಕೇಂದ್ರ ಸಚಿವ ಸಂಪುಟದ ಸಭೆಯಲ್ಲಿ ಮೇ 1 ರಿಂದ ಆಗಸ್ಟ್ 15, 2026 ರವರೆಗಿನ ಅವಧಿಯ ಸಚಿವರ ಸೋಶಿಯಲ್ ಮೀಡಿಯಾ ಪರ್ಫಾರ್ಮೆನ್ಸ್ ವರದಿಯನ್ನು ಪ್ರಸ್ತುತಪಡಿಸಲಾಗಿದ್ದು, ಈ ಪಟ್ಟಿಯಲ್ಲೂ ಪ್ರಧಾನಿ ಮೋದಿ ಅವರೇ ಅಗ್ರಸ್ಥಾನದಲ್ಲಿದ್ದಾರೆ.

ಇನ್‌ಸ್ಟಾಗ್ರಾಮ್, ಎಕ್ಸ್ (ಟ್ವಿಟರ್) ಹಾಗೂ ಫೇಸ್‌ಬುಕ್‌ನಲ್ಲಿ ಅವರ ದಿನನಿತ್ಯದ ಪೋಸ್ಟ್‌ಗಳು, ಸರಾಸರಿ ಇಂಗೇಜ್‌ಮೆಂಟ್, ಲೈಕ್ಸ್ ಹಾಗೂ ಫಾಲೋವರ್ಸ್ ಆಧಾರದ ಮೇಲೆ ಈ ಶ್ರೇಯಾಂಕ ನೀಡಲಾಗಿದೆ.

ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ವಿದ್ಯಾರ್ಥಿ ಪ್ರತಿಭಟನೆಗಳ ನಂತರ ಕೇಂದ್ರ ಸರ್ಕಾರವು ಯುವಕರನ್ನು ತಲುಪಲು 'ಜನ್-ಝಿ' ಹಾಗೂ ಸೃಷ್ಟಿಕರ್ತರ ಶೈಲಿಯ ಕಿರು ವೀಡಿಯೊಗಳು ಮತ್ತು 'ಸ್ನ್ಯಾಪ್‌ಚಾಟ್'ನಂತಹ ಪ್ಲಾಟ್‌ಫಾರ್ಮ್‌ಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುತ್ತಿದೆ.

ವಿದ್ಯಾರ್ಥಿಗಳಿಗೆ ನೀಡಿದ ವೀಡಿಯೊಗೆ 300 ಮಿಲಿಯನ್ ವೀವ್ಸ್

ನೀಟ್ ಪರೀಕ್ಷೆ ಅಕ್ರಮದ ವಿರೋಧವಾಗಿ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ಮಾಡುತ್ತಿದ್ದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಪ್ರಧಾನಿ ಮೋದಿ ಅವರು ರಾತ್ರಿ 12 ಗಂಟೆಗೆ ಇನ್‌ಸ್ಟಾಗ್ರಾಮ್ ರೀಲ್ಸ್‌ನಲ್ಲಿ ವೀಡಿಯೊ ಸಂದೇಶವೊಂದನ್ನು ಹಂಚಿಕೊಂಡಿದ್ದರು. ಈ ರೀಲ್ಸ್‌ನಲ್ಲಿ ವಿದ್ಯಾರ್ಥಿಗಳ ಹಲವು ಪ್ರಮುಖ ಆತಂಕ ಹಾಗೂ ಕಾಳಜಿಗಳಿಗೆ ಸ್ಪಂದಿಸಿ, ಸರ್ಕಾರ ಕೈಗೊಳ್ಳಲಿರುವ ಕ್ರಮಗಳ ಕುರಿತು ತಿಳಿಸಲಾಗಿತ್ತು. ಈ ಏಕೈಕ ವೀಡಿಯೊ ಕೆಲವೇ ಗಂಟೆಗಳಲ್ಲಿ 300 ಮಿಲಿಯನ್ (30 ಕೋಟಿ) ವೀಕ್ಷಣೆಗಳನ್ನು ಹಾಗೂ 16 ಮಿಲಿಯನ್ (1.6 ಕೋಟಿ) ಲೈಕ್ಸ್‌ಗಳನ್ನು ಗಳಿಸಿ ಹೊಸ ದಾಖಲೆ ಬರೆದಿತ್ತು.

## ರಾಜ್ಯ ರಾಜಕೀಯದಲ್ಲಿ ಸಂಚಲನ: ಸೆ. 18, 19ರಂದು ಗೃಹ ಸಚಿವ ಶಾ ರಾಜ್ಯ ಪ್ರವಾಸ

**ಸತ್ಯಮಿಥ್ಯ ಸುದ್ದಿಮೂಲ ಬೆಂಗಳೂರು :** ರಾಜ್ಯ ರಾಜಕೀಯದಲ್ಲಿ ಜಾರಿ ನಿರ್ದೇಶನಾಲಯದ (ಇಡಿ) ದಾಳಿ ತೀವ್ರ ಸಂಚಲನ ಮೂಡಿಸಿರುವ ಬೆನ್ನಲ್ಲೇ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೆಪ್ಟೆಂಬರ್ 18 ಮತ್ತು 19ರಂದು ರಾಜ್ಯಕ್ಕೆ ಎರಡು ದಿನಗಳ ಪ್ರವಾಸ ಕೈಗೊಂಡಿರುವುದು ತೀವ್ರ ಕುತೂಹಲ ಮೂಡಿಸಿದೆ.

ಇತ್ತೀಚೆಗಷ್ಟೇ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ಸಂಸ್ಥೆ ಹಾಗೂ ಆಪ್ತರ ಮೇಲೆ ಇ.ಡಿ ದಾಳಿ ನಡೆಸಿ ಶೋಧ ಕಾರ್ಯ ನಡೆಸಿರುವುದು ಆಡಳಿತ ಮತ್ತು ವಿಪಕ್ಷಗಳ ನಡುವೆ ಭಾರೀ ವಾಕ್ಸಮರಕ್ಕೆ ಕಾರಣವಾಗಿತ್ತು. ಈ ತನಿಖೆಯ ಕಾವು ಇನ್ನೂ ತಣಿಯದಿರುವಾಗಲೇ, ಸತೀಶ್ ಜಾರಕಿಹೊಳಿ ಅವರ ತವರು ಹಾಗೂ ಬಲವಾದ ಹಿಡಿತವಿರುವ ಬೆಳಗಾವಿ ಜಿಲ್ಲೆಗೆ ಕೇಂದ್ರ ಗೃಹ ಸಚಿವರೇ ನೇರವಾಗಿ ಆಗಮಿಸುತ್ತಿರುವುದು ಹಲವು ರಾಜಕೀಯ ಸಮೀಕರಣಗಳಿಗೆ ದಾರಿ ಮಾಡಿಕೊಟ್ಟಿದೆ.



**ಪ್ರವಾಸದ ವೇಳಾಪಟ್ಟಿ ಮತ್ತು ಕಾರ್ಯಕ್ರಮಗಳು:** ಸೆಪ್ಟೆಂಬರ್ 18 (ರಾತ್ರಿ 10:00): ಹುಬ್ಬಳ್ಳಿಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿರುವ ಅಮಿತ್ ಶಾ, ನಗರದ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ಆಸ್ಪತ್ರೆ ಹಾಗೂ ಕಾಲೇಜು ಉದ್ಘಾಟನೆ: ಬೆಳಿಗ್ಗೆ ಹುಬ್ಬಳ್ಳಿಯ ಗಬ್ಬೂರು ಬೈಪಾಸ್ ಬಳಿ ನೂತನವಾಗಿ ನಿರ್ಮಿಸಲಾಗಿರುವ ಕೆ.ಎಲ್.ಇ ಸಂಸ್ಥೆಯ 1,500 ಹಾಸಿಗೆಗಳ ಅಲ್ಟ್ರಾ-ಮಾಡರ್ನ್ ಹೈಟೆಕ್ ಆಸ್ಪತ್ರೆ ಹಾಗೂ ನೂತನ ವೈದ್ಯಕೀಯ ಮಹಾವಿದ್ಯಾಲಯದ ಕಟ್ಟಡವನ್ನು ಉದ್ಘಾಟಿಸಲಿದ್ದಾರೆ.

ಯಕ್ಸಂಬಾ ಭೇಟಿ: ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಯಕ್ಸಂಬಾ ಗ್ರಾಮಕ್ಕೆ ಭೇಟಿ ನೀಡಲಿದ್ದು, ಶಾಸಕಿ ಶಶಿಕಲಾ ಜೊಲ್ಲೆ ಹಾಗೂ ಮಾಜಿ ಸಂಸದ ಅಣ್ಣಾಸಾಹೇಬ್ ಜೊಲ್ಲೆ ಒಡೆತನದ ಬೀರೇಶ್ವರ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಯ ನೂತನ ಕಟ್ಟಡವನ್ನು ಉದ್ಘಾಟಿಸಲಿದ್ದಾರೆ.

**ರಾಜಕೀಯ ಮಹತ್ವ ಮತ್ತು ತಳಮಳ:** ಅಮಿತ್ ಶಾ ಅವರ ಈ ಭೇಟಿ ಕೇವಲ ಸಾಂಸ್ಥಿಕ ಉದ್ಘಾಟನೆಗಳಿಗಷ್ಟೇ ಸೀಮಿತವಾಗಿರದೆ, ಬೆಳಗಾವಿಯ ವಿಶಿಷ್ಟ ರಾಜಕೀಯ ಹಿನ್ನೆಲೆಯಿಂದಾಗಿ ಮಹತ್ವ ಪಡೆದುಕೊಂಡಿದೆ. ಹಿಂದೆ ಬೆಳಗಾವಿ ಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಜಾರಕಿಹೊಳಿ ಸಹೋದರರು ಹಾಗೂ ಜೊಲ್ಲೆ ಕುಟುಂಬ ಒಂದಾಗಿ ಅಖಾಡಕ್ಕಿಳಿದಿದ್ದವು. ಜಾರಕಿಹೊಳಿ ಬ್ರದರ್ಸ್ ಬೆಂಬಲದೊಂದಿಗೆ ಅಣ್ಣಾಸಾಹೇಬ್ ಜೊಲ್ಲೆ ಅವರು ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಇದೀಗ ಸತೀಶ್ ಜಾರಕಿಹೊಳಿ ವಿರುದ್ಧ ಕೇಂದ್ರ ತನಿಖಾ ಸಂಸ್ಥೆಯ ಸರಣಿ ತನಿಖೆ ಚುರುಕುಗೊಂಡ ಬೆನ್ನಲ್ಲೇ, ಅವರದೇ ಕ್ಷೇತ್ರದಲ್ಲಿ ಬಿಜೆಪಿ ನಾಯಕರಾದ ಜೊಲ್ಲೆ ಕುಟುಂಬದ ಕಾರ್ಯಕ್ರಮದಲ್ಲಿ ಅಮಿತ್ ಶಾ ಭಾಗವಹಿಸುತ್ತಿರುವುದು ಕಾಂಗ್ರೆಸ್ ವಲಯದಲ್ಲಿ ತಳಮಳ ಸೃಷ್ಟಿಸಿದೆ. ಈ ಪ್ರವಾಸದ ನೆಪದಲ್ಲಿ ಉತ್ತರ ಕರ್ನಾಟಕ ಭಾಗದ ಬಿಜೆಪಿ ನಾಯಕರನ್ನು ಅಮಿತ್ ಶಾ ಒಗ್ಗೂಡಿಸಲಿದ್ದು, ರಾಜ್ಯದ ಪ್ರಮುಖ ಬಿಜೆಪಿ ಮುಖಂಡರು ಈಗಾಗಲೇ ಹುಬ್ಬಳ್ಳಿಯಲ್ಲಿ ಬೀಡುಬಿಟ್ಟಿದ್ದಾರೆ. ಕೇಂದ್ರ ಗೃಹ ಸಚಿವರ ಕರ್ನಾಟಕ ಪ್ರವಾಸದ ಅಧಿಕೃತ ಕಾರ್ಯಕ್ರಮಗಳ ಕುರಿತು ಗೃಹ ಸಚಿವಾಲಯದ ಸೆಪ್ಟೆಂಬರ್‌ನ ಪ್ರಕಟಣೆಗಳಲ್ಲಿ ಇದುವರೆಗೆ ಸಂಪೂರ್ಣ ಪ್ರವಾಸದ ವಿವರ ಕಾಣಿಸದಿದ್ದರೂ, ಸೆಪ್ಟೆಂಬರ್ 7ರಂದು ಗೋವಾದಲ್ಲಿ ಪಶ್ಚಿಮ ವಲಯ ಮಂಡಳಿಯ ಸಭೆ ಸೇರಿದಂತೆ ಇತ್ತೀಚಿನ ದಿನಗಳಲ್ಲಿ ಶಾ ಹಲವು ದಕ್ಷಿಣ ಭಾರತದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

## ಯುಪಿಐ ವಹಿವಾಟುಗೆ ಹೊಸ ಶುಲ್ಕ: ಶುಲ್ಕ ಕಟ್ಟುವವರು ಗ್ರಾಹಕರೋ, ವ್ಯಾಪಾರಿಗಳೋ?

**ಸತ್ಯಮಿಥ್ಯ ಸುದ್ದಿಮೂಲ ಬೆಂಗಳೂರು :** ಕೇಂದ್ರ ಸರ್ಕಾರವು ಯುಪಿಐ ಡಿಜಿಟಲ್ ಪಾವತಿ ವ್ಯವಸ್ಥೆಗೆ ಸಂಬಂಧಿಸಿದಂತೆ ಮಹತ್ವದ ಹೊಸ ನಿಯಮಗಳನ್ನು ಘೋಷಿಸಿದೆ. 2,000 ರೂಗಿಂತ ಹೆಚ್ಚಿನ ಮೌಲ್ಯದ ವಾಣಿಜ್ಯ ವಹಿವಾಟುಗಳಿಗೆ ಶೇಕಡಾ 0.4 ರಷ್ಟು ಶುಲ್ಕ ವಿಧಿಸಲು ನಿರ್ಧರಿಸಲಾಗಿದೆ. ಈ ನೂತನ ನಿಯಮಾವಳಿಗಳು 2026ರ ಅಕ್ಟೋಬರ್ 15ರಿಂದ ಅಧಿಕೃತವಾಗಿ ಜಾರಿಗೆ ಬರಲಿವೆ.



ಈ ಶುಲ್ಕವನ್ನು ಗ್ರಾಹಕರು ಭರಿಸಬೇಕಾಗಿಲ್ಲ. ಬದಲಾಗಿ, ಯುಪಿಐ ಮೂಲಕ ಹಣವನ್ನು ಸ್ವೀಕರಿಸುವ ವರ್ತಕರು ಅಥವಾ ವ್ಯಾಪಾರಿಗಳು ಈ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಉದಾಹರಣೆಗೆ, 3,000 ರೂ. ವಹಿವಾಟಿಗೆ 12 ರೂ., 50,000 ರೂ. ವಹಿವಾಟಿಗೆ 200 ರೂ. ಶುಲ್ಕ ಬೀಳುತ್ತದೆ. 75,000 ರೂ. ಗಿಂತ ಹೆಚ್ಚಿನ ಮೊತ್ತಕ್ಕೆ ಗರಿಷ್ಠ 300 ರೂ. ಶುಲ್ಕ ನಿಗದಿಪಡಿಸಲಾಗಿದೆ.

ವ್ಯಕ್ತಿಯಿಂದ ವ್ಯಕ್ತಿಗೆ ಹಣ ವರ್ಗಾವಣೆ ಅಥವಾ ಸಾಮಾನ್ಯ ಸಾರ್ವಜನಿಕ ಪಾವತಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ. ಅಂದರೆ, ಫೋನ್‌ಪೇ , ಗೂಗಲ್ ಪೇ ಅಂತಹ ಅಪ್ಲಿಕೇಶನ್‌ಗಳ ಮೂಲಕ ಸ್ನೇಹಿತರಿಗೆ ಅಥವಾ ಕುಟುಂಬ ಸದಸ್ಯರಿಗೆ ಹಣ ಕಳುಹಿಸಿದರೆ ಅದು ಸಂಪೂರ್ಣ ಉಚಿತವಾಗಿರುತ್ತದೆ. ಶಾಲಾ ಶುಲ್ಕ, ನೀರಿನ ಬಿಲ್, ವಿದ್ಯುತ್ ಬಿಲ್ ಹಾಗೂ ರೈಲ್ವೆ ಟಿಕೆಟ್ ಬುಕಿಂಗ್‌ನಂತಹ ಸೇವೆಗಳಿಗೂ ಶುಲ್ಕ ಅನ್ವಯವಾಗುತ್ತದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

## ಪೂಜೆಗೆ ನೀರು ತರಲು ತೆರಳಿದ್ದ ಕೃಷಿ ವಿವಿ ವಿಶ್ರಾಂತ ಕುಲಪತಿ ಮಂಜುನಾಥ ಸಾವು

**ಕಾರವಾರ:** ಕೃಷಿ ವಿಜ್ಞಾನಿ ಹಾಗೂ ಕೃಷಿ ವಿಶ್ವ ವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಮಂಜುನಾಥ ನಾಯ್ಕ(65) ಅವರು ಗಣೇಶ ಹಬ್ಬದ ಪೂಜೆಗಾಗಿ ನೀರು ತರಲು ಹೋದಾಗ ಆಕಸ್ಮಿಕವಾಗಿ ಬಾವಿಗೆ ಬಿದ್ದು ಮೃತಪಟ್ಟಿರುವ ದಾರುಣ ಘಟನೆ ಬುಧವಾರ ನಡೆದಿದೆ.

ಕೃಷಿ ವಿಜ್ಞಾನಿಯಾಗಿ, ನೂರಾರು ವಿದ್ಯಾರ್ಥಿಗಳಿಗೆ ಹಾಗೂ ಸಂಶೋಧನಾರ್ಥಿಗಳಿಗೆ ಗುರುಗಳಾಗಿ ಮತ್ತು ಕೃಷಿಕರಿಗೆ ಉತ್ತಮ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸಿದ್ದ ಮಂಜುನಾಥ ಅವರು ಗಣೇಶ ಹಬ್ಬಕ್ಕೆ ಊರಿಗೆ ಹೋಗಿದ್ದರು. ಈ ವೇಳೆ ಗಣೇಶ ಪೂಜೆಗೆ ನೀರು ತರಲೆಂದು ಹೋದಾಗ ಬಾವಿಗೆ ಬಿದ್ದು ಮೃತ ಪಟ್ಟಿದ್ದಾರೆ. ಅವರ ಸ್ವಗ್ರಾಮದಲ್ಲೇ ಅಂತ್ಯಕ್ರಿಯೆ ನಡೆದಿದೆ.

ಉತ್ತನ ಕನ್ನಡ ಜಿಲ್ಲೆ ಕುಮಟಾ ತಾಲ್ಲೂಕಿನ ಕೋನಳ್ಳಿ ಗ್ರಾಮದ ಮಂಜುನಾಥ ಅವರು, ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಹಾಗೂ ತೋಟಗಾರಿಗೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ್ದರು.

## ಯುಪಿಐ ಮೇಲೆ ಎಂಡಿಆರ್ ಶುಲ್ಕ: ವಿಪಕ್ಷಗಳ ಆರೋಪ ತಳ್ಳಾಕಿದ ಕೇಂದ್ರ

ನವದೆಹಲಿ: ಯುಪಿಐ (ಗಕಋ) ಪಾವತಿಗಳ ಮೇಲೆ ವ್ಯಾಪಾರಿ ರಿಯಾಯಿತಿ ದರ (ಎಂಡಿಆರ್-ಒಆಖ) ಪರಿಚಯಿಸುವ ನಿರ್ಧಾರವು ವಿದೇಶಿ ಪ್ರಭಾವದಿಂದ ಕೂಡಿದೆ ಎಂಬ ವಿಪಕ್ಷಗಳ ಆರೋಪವನ್ನು ಕೇಂದ್ರ ಸರ್ಕಾರ ಬುಧವಾರ ತೀವ್ರವಾಗಿ ತಿರಸ್ಕರಿಸಿದೆ. ಭಾರತದ ಯುಪಿಐ ನೀತಿ ನಿರ್ಧಾರಗಳನ್ನು 'ಸ್ವತಂತ್ರವಾಗಿ' ತೆಗೆದುಕೊಳ್ಳಲಾಗಿದ್ದು, ಇದು ಗ್ರಾಹಕರಿಗೆ ಉಚಿತವಾಗಿ ಮುಂದುವರಿಯಲಿದೆ ಎಂದು ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ.




ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಸಮಾಧಾನಪಡಿಸುವ ಗುರಿಯೊಂದಿಗೆ ಹಾಗೂ ಅಮೆರಿಕದ ವೀಸಾ ಮತ್ತು ಮಾಸ್ಟರ್‌ಕಾರ್ಡ್ ಕಂಪನಿಗಳ ದೂರಿನ ಹಿನ್ನೆಲೆಯಲ್ಲಿ ಸರ್ಕಾರ ಈ ಶುಲ್ಕವನ್ನು ಪರಿಚಯಿಸಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು. ಇದಕ್ಕೆ ಪ್ರತಿಕ್ರಿಯಿಸಿರುವ ಸರ್ಕಾರ, "ಸ್ವಾವಲಂಬಿ, ಅಂತರ್ಗತ ಹಾಗೂ ಕೈಗೆಟುಕುವ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ನಿರ್ಮಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆಯೇ ಹೊರತು, ಇದರಲ್ಲಿ ಯಾವುದೇ ವಿದೇಶಿ ಪ್ರಭಾವವಿಲ್ಲ" ಎಂದು ಸ್ಪಷ್ಟನೆ ನೀಡಿದೆ.

ಅಕ್ಟೋಬರ್ 15 ರಿಂದ ಶುಲ್ಕ ಜಾರಿ:

ಅಕ್ಟೋಬರ್ 15 ರಿಂದ 2,000ಕ್ಕಿಂತ ಹೆಚ್ಚಿನ ಯುಪಿಐ ವಹಿವಾಟುಗಳ ಮೇಲೆ ಶೇ 0.4 ರಷ್ಟು ಎಂಡಿಆರ್ ಶುಲ್ಕ ವಿಧಿಸಲಾಗುತ್ತದೆ. ಈ ಶುಲ್ಕವನ್ನು ಕೇವಲ ವ್ಯಾಪಾರಿಗಳು ಮಾತ್ರ ಪಾವತಿಸಲಿದ್ದು, ಗ್ರಾಹಕರಿಗೆ ಇದರಿಂದ ಯಾವುದೇ ತೊಂದರೆಯಾಗುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ತಿಳಿಸಿದೆ. ಉದಾಹರಣೆಗೆ, ವ್ಯಾಪಾರಿಯೊಬ್ಬರು 10,000 ಯುಪಿಐ ಪಾವತಿ ಸ್ವೀಕರಿಸಿದಾಗ 40 ಶುಲ್ಕ ಪಾವತಿಸಬೇಕಾಗುತ್ತದೆ. ತಿಂಗಳಿಗೆ ಯುಪಿಐ ಮೂಲಕ 1 ಲಕ್ಷಕ್ಕಿಂತ ಹೆಚ್ಚು ಹಣ ಪಡೆಯುವ ಅಂಗಡಿಯವರು ಅಥವಾ ಘಟಕಗಳನ್ನು ವ್ಯಾಪಾರಿ ಎಂದು ಪರಿಗಣಿಸಲಾಗುತ್ತದೆ.

ಸರ್ಕಾರದ ವಿರುದ್ಧ ರಾಹುಲ್ ಗಾಂಧಿ, ಖರ್ಗೆ ವಾಗ್ದಾಳಿ:

ಸರ್ಕಾರದ ಈ ಕ್ರಮವನ್ನು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ತೀವ್ರವಾಗಿ ಟೀಕಿಸಿದ್ದು, ಪ್ರಧಾನಿಯವರು 'ರಾಜಿ ಮಾಡಿಕೊಂಡಿದ್ದಾರೆ' ಎಂದು ಆರೋಪಿಸಿದ್ದಾರೆ. "ಮೋದಿ ಸರ್ಕಾರವು ಪರೋಕ್ಷವಾಗಿ ಶುಲ್ಕ ವಿಧಿಸಲು ದಾರಿ ಮಾಡಿಕೊಟ್ಟಿದೆ. 2,000ಕ್ಕಿಂತ ಹೆಚ್ಚಿನ ವಹಿವಾಟುಗಳು ಒಟ್ಟು ವಹಿವಾಟಿನ ಶೇ 5ರಷ್ಟಿದ್ದರೂ, ಮೌಲ್ಯದ ದೃಷ್ಟಿಯಿಂದ ಇವು ಶೇ 65ರಷ್ಟು ಪಾಲನ್ನು ಹೊಂದಿವೆ" ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಲ್ಲದೆ, "ಅಂಗಡಿದಾರರ ಮೇಲೆ ಹೇರಲಾದ ಈ ಶುಲ್ಕದ ಹೊರೆ ಅಂತಿಮವಾಗಿ ವಸ್ತುಗಳ ಬೆಲೆಗೆ ಸೇರ್ಪಡೆಯಾಗಿ ಗ್ರಾಹಕರ ಜೇಬಿನಿಂದಲೇ ಹೋಗುತ್ತದೆ" ಎಂದು ಅವರು ಪ್ರತಿಪಾದಿಸಿದ್ದಾರೆ. ಅಮೆರಿಕದ ಒತ್ತಡಕ್ಕೆ ಮಣಿದು 'ಶೂನ್ಯ-ಎಂಡಿಆರ್' ನೀತಿಯನ್ನು ಬದಲಾಯಿಸಲಾಗಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದರೆ, ಹಣದುಬ್ಬರದಿಂದ ಬಳಲುತ್ತಿರುವ ಜನರ ಜೇಬಿಗೆ ಸರ್ಕಾರ ಪ್ರತಿದಿನ ಕನ್ನ ಹಾಕುತ್ತಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದ್ದಾರೆ.

**ಡಾ. ರಾಜ್‌ಕುಮಾರ್ ಬಳಿಕ ಈ ಪ್ರಶಸ್ತಿ ಪಡೆದ ಕನ್ನಡದ 2ನೇ ನಟ**

## ಹಿರಿಯ ನಟ ಅನಂತ್ ನಾಗ್‌ಗೆ ಪ್ರತಿಷ್ಠಿತ 'ದಾದಾಸಾಹೇಬ್ ಫಾಲ್ಕೆ' ಗೌರವ

ಬೆಂಗಳೂರು: ಕನ್ನಡ ಚಿತ್ರರಂಗದ ಸಾರ್ವಕಾಲಿಕ ಶ್ರೇಷ್ಠ ಹಾಗೂ ಅಭಿನಯ ಶಾರದೆ ಎನಿಸಿಕೊಂಡಿರುವ ಹಿರಿಯ ನಟ ಅನಂತ್ ನಾಗ್ ಅವರಿಗೆ 2024ರ ಸಾಲಿನ ಪ್ರತಿಷ್ಠಿತ 'ದಾದಾಸಾಹೇಬ್ ಫಾಲ್ಕೆ' ಪ್ರಶಸ್ತಿ ಅನೌನ್ಸ್ ಆಗಿದೆ. ಭಾರತೀಯ ಚಲನಚಿತ್ರ ರಂಗಕ್ಕೆ ಅವರು ನೀಡಿದ ಅಪಾರ ಮತ್ತು ಸುದೀರ್ಘ ಕೊಡುಗೆಯನ್ನ ಗುರುತಿಸಿ, "ದಾದಾಸಾಹೇಬ್ ಫಾಲ್ಕೆ' ಪ್ರಶಸ್ತಿ ಆಯ್ಕೆ ಸಮಿತಿಯ ಶಿಫಾರಸಿನ ಮೇರೆಗೆ ಕೇಂದ್ರ ಸರ್ಕಾರ ಈ ನಿರ್ಧಾರವನ್ನ ಪ್ರಕಟಿಸಿದೆ.



1995ರಲ್ಲಿ ವರನಟ ಡಾ. ರಾಜ್‌ಕುಮಾರ್ ಅವರಿಗೆ ಈ ಗೌರವ ಲಭಿಸುವ ಮೂಲಕ ಕನ್ನಡ ಚಿತ್ರರಂಗ ಮೊದಲ ಬಾರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನ ತನ್ನದಾಗಿಸಿಕೊಂಡಿತ್ತು. ತದನಂತರ, 2008ರಲ್ಲಿ ಕನ್ನಡಿಗ ವಿ.ಕೆ ಮೂರ್ತಿ ಅವರಿಗೆ ಈ ಪ್ರಶಸ್ತಿ ಒಲಿದುಬಂದಿತ್ತು. ಈಗ ಬರೋಬ್ಬರಿ 16 ವರ್ಷಗಳ ಸುದೀರ್ಘ ವಿರಾಮದ ಬಳಿಕ ಮತ್ತೊಬ್ಬ ಕನ್ನಡಿಗ ಅನಂತ್ ನಾಗ್ ಅವರಿಗೆ ಈ ಅತ್ಯುನ್ನತ ಗೌರವ ಲಭಿಸಿರೋದು ವಿಶೇಷ. ಅಭಿನಯ ಕ್ಷೇತ್ರದಲ್ಲಿ ಡಾ. ರಾಜ್‌ಕುಮಾರ್ ಅವರ ನಂತರ ಈ ಪ್ರಶಸ್ತಿ ಪಡೆಯುತ್ತಿರುವ ಎರಡನೇ ನಟ ಎಂಬ ವಿಶೇಷತೆಯೂ ಅನಂತ್ ನಾಗ್ ಅವರದ್ದಾಗಿದೆ. ಅನಂತ್ ನಾಗ್ ಅವರು ಕನ್ನಡ, ಹಿಂದಿ, ಮರಾಠಿ, ತೆಲುಗು ಮತ್ತು ಮಲೆಯಾಳಂ ಸೇರಿದಂತೆ ಹಲವು ಭಾಷೆಗಳಲ್ಲಿ ತಮ್ಮ ನಟನೆಯ ಛಾಪನ್ನ ಮೂಡಿಸಿದ್ದಾರೆ.

ಸಿನಿಮಾ ರಂಗದ ಅತ್ಯುನ್ನತ ಗೌರವವೆನಿಸಿದ ಈ ಪ್ರಶಸ್ತಿಯು ಅನಂತ್ ನಾಗ್ ಅವರ ಹಲವು ದಶಕಗಳ ಅದ್ಭುತ ಅಭಿನಯ ಪಯಣಕ್ಕೆ ಸಂದ ಸೂಕ್ತ ಸನ್ಮಾನವಾಗಿದೆ. ಇದೇ ಸೆಪ್ಟೆಂಬರ್ 22, 2026ರಂದು ಗುಜರಾತ್‌ನ ಏಕ್ತಾ ನಗರದಲ್ಲಿ ನಡೆಯಲಿರುವ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಗೌರವವನ್ನ ಅವರಿಗೆ ಅಧಿಕೃತವಾಗಿ ಪ್ರದಾನ ಮಾಡಲಾಗುವುದು. ಅನಂತ್ ನಾಗ್ ಅವರಿಗೆ ಪ್ರಶಸ್ತಿ ಪ್ರಕಟವಾಗುತ್ತಿದ್ದಂತೆ ಚಿತ್ರರಂಗದ ಪ್ರಮುಖರು, ಹೆಚ್‌ಡಿ ಕುಮಾರಸ್ವಾಮಿ, ಸಿಎಂ ಡಿಕೆ ಶಿವಕುಮಾರ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ರಾಜಕಾರಣಿಗಳು ಹಾಗೂ ಅಭಿಮಾನಿಗಳು ಹರ್ಷ ವ್ಯಕ್ತಪಡಿಸಿದ್ದು, ಹಿರಿಯ ನಟನಿಗೆ ಶುಭಾಶಯಗಳ ಮಹಾಪೂರವೇ ಹರಿದುಬರುತ್ತಿದೆ. ಅನಂತ್ ನಾಗ್ ಅವರು, ಗಂಭೀರ ಪಾತ್ರಗಳಿಂದ ಹಿಡಿದು ಹಾಸ್ಯಮಯ ಪಾತ್ರಗಳವರೆಗೆ ಪ್ರತಿಯೊಂದಕ್ಕೂ ಜೀವ ತುಂಬಿದ್ದಾರೆ. 'ಬಯಲು ದಾರಿ', 'ಚಂದನದ ಗೊಂಬೆ', 'ಬೆಂಕಿಯ ಬಲೆ'ಯಂತಹ ಸಿನಿಮಾಗಳಾಗಲಿ, 'ಗಣೇಶನ ಮದುವೆ', 'ಗೌರಿ ಗಣೇಶ' ಸಿನಿಮಾಗಳ ಹಾಸ್ಯ ದರ್ಬಾರ್ ಆಗಲಿ, ಪ್ರೇಕ್ಷಕರ ಮನಸ್ಸಿನಲ್ಲಿ ಎಂದಿಗೂ ಅಮರ. 'ಮಾಲ್ಗುಡಿ ಡೇಸ್' ಮೂಲಕ ದೇಶಾದ್ಯಂತ ಪ್ರತಿ ಮನೆಮಾತಾಗಿದ್ದ ಅವರು, ಇತ್ತೀಚಿನ 'ಕೆಜಿಎಫ್' ಸಿನಿಮಾಗಳವರೆಗೂ ತಮ್ಮ ಅಭಿನಯದ ಸಾಮರ್ಥ್ಯವನ್ನ ಸಾಬೀತುಪಡಿಸುತ್ತಲೇ ಬಂದಿದ್ದಾರೆ.

# ಇಡಿ ಇಕ್ಕಟ್ಟಿನಲ್ಲಿ ಕನ್ನಾಳೆ, ಜ್ಞಾನೇಂದ್ರ

**ಬೆಂಗಳೂರು:** ಪಶು ವೈದ್ಯಾಧಿಕಾರಿಗಳ ನೇಮಕಾತಿ ಅಕ್ರಮದ ತನಿಖೆ ತೀವ್ರಗೊಂಡಿದ್ದು, ಸಿಐಡಿ ಬೆನ್ನಲ್ಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ತನಿಖಾ ಅಖಾಡಕ್ಕೆ ಇಳಿದಿದ್ದಾರೆ. ಪ್ರಕರಣದಲ್ಲಿ ಬಂಧಿತರಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿರುವ ಬಸವರಾಜ್ ಕನ್ನಾಳೆ ಮತ್ತು ಐಎಎಸ್ ಅಧಿಕಾರಿ ಜ್ಞಾನೇಂದ್ರಕುಮಾರ್ ಗಂಗ್ವಾರ್ ಅವರನ್ನು ಇ.ಡಿ ಅಧಿಕಾರಿಗಳು ಜೈಲಿನಲ್ಲೆ ವಿಚಾರಣೆ ನಡೆಸಿದ್ದಾರೆ.



**ಕನ್ನಾಳೆ-ಜ್ಞಾನೇಂದ್ರಕುಮಾರ್‌ಗೆಇಡಿಡ್ರಿಲ್:** ಬಸವರಾಜ್ ಕನ್ನಾಳೆ ಹಾಗೂ ಜ್ಞಾನೇಂದ್ರಕುಮಾರ್‌ಗೆ ತನಿಖೆಯ ಉರುಳು ಬಿಗಿಯಾಗಿದ್ದು, ಇ.ಡಿ ಅಧಿಕಾರಿಗಳು ಈ ಇಬ್ಬರನ್ನೂ ಮುಖಾಮುಖಿ ಕೂರಿಸಿ ಸುದೀರ್ಘ ವಿಚಾರಣೆ ನಡೆಸಿದ್ದಾರೆ. ಪಶು ವೈದ್ಯಾಧಿಕಾರಿಗಳ ನೇಮಕಾತಿ ಅಕ್ರಮದ ಸಂಬಂಧ ಅಧಿಕಾರಿಗಳು ಈ ಇಬ್ಬರಿಗೂ ಪ್ರಶ್ನೆಗಳ ಸುರಿಮಳೆ ಸುರಿಸಿದ್ದು, ವಿಚಾರಣೆ ವೇಳೆ ಮಹತ್ವದ ಸಂಗತಿಗಳು ಬಯಲಾಗಿವೆ.

ಈ ಹಿಂದೆ ಪ್ರಕರಣದ ತನಿಖೆ ನಡೆಸಿದ್ದ ರಾಜ್ಯದ ಸಿಐಡಿ ಅಧಿಕಾರಿಗಳಿಗೆ ಅಕ್ರಮ ಹಣಕಾಸು ವ್ಯವಹಾರ, ಅನಾಮಧೇಯ ಬ್ಯಾಂಕ್ ಖಾತೆಗಳ ವಿವರ ಹಾಗೂ ಅಕ್ರಮ ಆಸ್ತಿ ಗಳಿಕೆಯ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಸಿಐಡಿ ಸಂಗ್ರಹಿಸಿದ್ದ ದಾಖಲೆಗಳು, ಸಾಕ್ಷ್ಯಾಧಾರಗಳು, ಹಣಕಾಸು ವ್ಯವಹಾರದ ಮಾಹಿತಿ ಪಡೆದುಕೊಂಡಿದ್ದ ಇ.ಡಿ ಅಧಿಕಾರಿಗಳು, ಹಣದ ಅಕ್ರಮ ವರ್ಗಾವಣೆ ತಡೆ ಕಾಯಿದೆಯಡಿ ತನಿಖೆ ಕೈಗೆತ್ತಿಕೊಂಡಿದ್ದಾರೆ.

ಇ.ಡಿ ಅಧಿಕಾರಿಗಳು ಈ ಹಿಂದೆ ಬಸವರಾಜ್ ಕನ್ನಾಳೆ, ಜ್ಞಾನೇಂದ್ರಕುಮಾರ್ ಸೇರಿದಂತೆ ಪ್ರಕರಣದ ಆರೋಪಿಗಳ ಮನೆ ಮೇಲೆ ದಾಳಿ ಮಾಡಿದ್ದಾಗ ಪ್ರಮುಖ ದಾಖಲೆಗಳು ಸಿಕ್ಕಿದ್ದವು. ಇ.ಡಿ ಅಧಿಕಾರಿಗಳು ಈ ದಾಖಲೆಗಳು ಹಾಗೂ ಸಿಐಡಿ ವರದಿಯನ್ನು ಕನ್ನಾಳೆ ಮತ್ತು ಜ್ಞಾನೇಂದ್ರಕುಮಾರ್ ಅವರ ಮುಂದಿಟ್ಟು ವಿಚಾರಣೆ ನಡೆಸಿದ್ದಾರೆ. ನೇಮಕಾತಿ ಅಕ್ರಮದ ಮೂಲಕ ಗಳಿಸಿದ ಕೋಟಿಗಟ್ಟಲೇ ಹಣ ಎಲ್ಲಿಗೆ ಹೋಯಿತು? ಈ ಹಣದಲ್ಲಿ ಯಾರ್ಯಾರು ಪಾಲು ಪಡೆದಿದ್ದಾರೆ, ಹಣವನ್ನು ಎಲ್ಲಿ ಹೂಡಿಕೆ ಮಾಡಲಾಗಿದೆ ಎಂಬ ಬಗ್ಗೆ ಅಧಿಕಾರಿಗಳು ಸಮಗ್ರ ಮಾಹಿತಿ ಕಲೆಹಾಕಿದ್ದಾರೆ.

**400ಕ್ಕೂ ಹೆಚ್ಚು ಜನರ ವಿಚಾರಣೆ:** ಪ್ರಶ್ನೆಪತ್ರಿಕೆ ಸೋರಿಕೆ ಬಳಿಕ ದೇವನಹಳ್ಳಿ ರೆಸಾರ್ಟ್‌ನಲ್ಲಿ ಅಭ್ಯರ್ಥಿಗಳಿಂದ ಪರೀಕ್ಷೆ ಬರೆಸಿರುವುದು, ಜ್ಞಾನೇಂದ್ರಕುಮಾರ್ ಅವರಿಂದ ಪ್ರಶ್ನೆಪತ್ರಿಕೆ ಪಡೆದದ್ದು, ಅಭ್ಯರ್ಥಿಗಳನ್ನು ರಾಜಾಜಿನಗರ ಮತ್ತು ಮೆಜೆಸ್ಟಿಕ್‌ನಿಂದ ವಿಶೇಷ ಬಸ್‌ಗಳಲ್ಲಿ ದೇವನಹಳ್ಳಿಯ ರೆಸಾರ್ಟ್‌ಗೆ ಕರೆದೊಯ್ದು ಪರೀಕ್ಷೆಗೆ ತರಬೇತುಗೊಳಿಸಿದ್ದು, ಪರೀಕ್ಷೆ ಬಳಿಕ ಒಎಂಆರ್ ಶೀಟ್‌ಗಳನ್ನು ತಿದ್ದಿಸಿದ ವಿಚಾರವನ್ನು ಕನ್ನಾಳೆ, ಇ.ಡಿ ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾರೆ ಎಂದು ಗೊತ್ತಾಗಿದೆ. ಕನ್ನಾಳೆಯಿಂದ ತರಬೇತಿ ಪಡೆದ ಕೆಲ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳ ಬಳಿಯೇ ಇತರೆ ಅಭ್ಯರ್ಥಿಗಳಿಗೆ 3ರಿಂದ 5 ಲಕ್ಷ ರೂ.ಗೆ ಪ್ರಶ್ನೆಪತ್ರಿಕೆ ಮಾರಾಟ ಮಾಡಿರುವ ಸಂಗತಿ ಇ.ಡಿ ತನಿಖೆಯಲ್ಲಿ ಬಯಲಾಗಿದೆ.

ಸಿಐಡಿ ಅಧಿಕಾರಿಗಳು ತನಿಖೆಯ ಭಾಗವಾಗಿ ವಶಪಡಿಸಿಕೊಂಡಿದ್ದ ದೇವನಹಳ್ಳಿಯ ರೆಸಾರ್ಟ್‌ನ ಸಿ.ಸಿ ಕ್ಯಾಮೆರಾ ದೃಶ್ಯಾವಳಿ, ಅಭ್ಯರ್ಥಿಗಳನ್ನು ರೆಸಾರ್ಟ್‌ಗೆ ಕರೆದೊಯ್ಯಲು ಬಳಸಿದ್ದ ಬಸ್‌ಗಳು ಮತ್ತು ಕನ್ನಾಳೆಯ ಕಾರನ್ನು ಇ.ಡಿ ಅಧಿಕಾರಿಗಳು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಪ್ರಕರಣ ಸಂಬಂಧ ಇ.ಡಿ ಅಧಿಕಾರಿಗಳು, ದೇವನಹಳ್ಳಿಯ ರೆಸಾರ್ಟ್‌ನ ಸೆಕ್ಯೂರಿಟಿ ಗಾರ್ಡ್, ಕೆಪಿಎಸ್‌ಸಿ ಕಚೇರಿ ಸಿಬ್ಬಂದಿ ಹಾಗೂ ಲಂಚ ಕೊಟ್ಟು ಆಯ್ಕೆಯಾಗಿರುವ ಅಭ್ಯರ್ಥಿಗಳು ಸೇರಿದಂತೆ 400ಕ್ಕೂ ಹೆಚ್ಚು ಮಂದಿಯ ವಿಚಾರಣೆ ನಡೆಸಿದ್ದಾರೆ. ಪ್ರಕರಣದ ಅತಿ ಪ್ರಮುಖ ಸಾಕ್ಷ್ಯಗಳಾದ ಮೊಬೈಲ್ ಮತ್ತು ಪೆನ್‌ಡ್ರೈವ್‌ಗಳನ್ನು ಕನ್ನಾಳೆ ಶ್ರೀರಂಗಪಟ್ಟಣದ ಕಾವೇರಿ ನದಿಗೆ ಎಸೆದಿರುವ ಶಂಕೆಯಿದ್ದು, ಈ ಸಂಬಂಧ ಇ.ಡಿ ಅಧಿಕಾರಿಗಳು ಶೋಧ ಕಾರ್ಯ ಮುಂದುವರಿಸಿದ್ದಾರೆ.

ಸತ್ಯಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ
SATYA MITHI
Kannada Daily Morning

# ಪ್ರಜಾಪ್ರಭುತ್ವ ಬಳಪಡಿಸುವಲ್ಲಿ ನಾಗರಿಕರ ಪಾತ್ರ ಮಹತ್ವದ್ದು: ಕೆ. ನಾಗರಾಜ್

**ಸತ್ಯಮಿಥ್ಯ ಸುದ್ದಿಮೂಲ ರೋಣ**

"ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ದೇಶದ ಪ್ರತಿಯೊಬ್ಬ ನಾಗರಿಕನ ಪಾತ್ರವೂ ಅತ್ಯಂತ ಮಹತ್ವದ್ದಾಗಿದೆ. ಸಂವಿಧಾನ ನೀಡಿದ ಹಕ್ಕುಗಳನ್ನು ಅನುಭವಿಸುವ ಜೊತೆಗೆ, ಅದ-ಕ್ಕೆ ತಕ್ಕಂತೆ ಕರ್ತವ್ಯಗಳನ್ನು ನಿರ್ವಹಿಸುವುದು ಪ್ರತಿಯೊಬ್ಬರ ಆದ್ಯ ಹೊಣೆಗಾರಿಕೆಯಾಗಿದೆ," ಎಂದು ರೋಣ ತಾಲೂಕಿನ ತಹಶೀಲ್ದಾರ್ ಕೆ. ನಾಗರಾಜ್ ಪ್ರತಿಪಾದಿಸಿದರು.

ನಗರದ ಗುರು ಭವನದಲ್ಲಿ ತಾಲೂಕು ಆಡಳಿತದ ವತಿಯಿಂದ ಅತ್ಯಂತ ಅರ್ಥಪೂರ್ಣವಾಗಿ ಆಯೋಜಿಸಲಾಗಿದ್ದ 'ಪ್ರಜಾಪ್ರಭುತ್ವ ದಿನಾಚರಣೆ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಸಭೆಯನ್ನುದ್ದೇಶಿಸಿ ಅವರು ಮಾತನಾಡುತ್ತ

ಸಂವಿಧಾನದ ಆಶಯ ಜೀವನದಲ್ಲಿ ಅಳವಡಿಕೆಯಾಗಲಿ

ಕಾರ್ಯಕ್ರಮದಲ್ಲಿ ಸಂವಿಧಾನದ ಮಹತ್ವ ಹಾಗೂ ಪ್ರಜಾಪ್ರಭುತ್ವದ ಆಶಯಗಳ ಕುರಿತು ವಿಸ್ತಾರವಾಗಿ ಮಾತನಾಡಿದ ತಹಶೀಲ್ದಾರ್, "ಸಂವಿಧಾನವು ದೇಶದ ಪ್ರತಿಯೊಬ್ಬ ಪ್ರಜೆಗೂ ಗೌರವಯುತ ಹಾಗೂ ನೆಮ್ಮದಿಯ ಬದುಕು ಸಾಗಿಸಲು ಸಮಾನ ಅವಕಾಶಗಳನ್ನು ಒದಗಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 'ಮತದಾನದ ಹಕ್ಕು' ನಾಗರಿಕನ ಅತಿ ದೊಡ್ಡ ಅಸ್ತ್ರ. ಸಂವಿಧಾನದ ಪೀಠಿಕೆಯಲ್ಲಿ ಉಲ್ಲೇಖಿಸಲಾಗಿರುವ ದೇಶದ ಮೂಲ ಮೌಲ್ಯಗಳನ್ನು ಕೇವಲ ಪುಸ್ತಕದ ಪುಟಗಳಿಗೆ ಸೀಮಿತಗೊಳಿಸಬಾರದು. ಬದಲಾಗಿ, ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಕಾನೂನು ಪಾಲನೆ, ಸಾಮಾಜಿಕ ಹೊಣೆಗಾರಿಕೆ ಮತ್ತು ರಾಷ್ಟ್ರ ನಿರ್ಮಾಣಕ್ಕೆ ಕೈಜೋಡಿಸುವ ಮೂಲಕ ಅದನ್ನು ಸಾಕಾರಗೊಳಿಸಬೇಕು," ಎಂದು ಕರೆ ನೀಡಿದರು.



ಕಾರ್ಯಕ್ರಮದ ಅಂಗವಾಗಿ ಸಭೆಯಲ್ಲಿದ್ದ ಎಲ್ಲರೂ ಭಾರತದ ಸಂವಿಧಾನದ ಪೀಠಿಕೆಯನ್ನು ಸಾಮೂಹಿಕವಾಗಿ ವಾಚಿಸಿದರು. ಈ ಮೂಲಕ ರಾಷ್ಟ್ರದ ಏಕತೆ, ಸಮಗ್ರತೆ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳ ಮೇಲಿನ ಬದ್ಧತೆಯನ್ನು ಪುನರುಚ್ಚರಿಸಲಾಯಿತು.

ಆಯೋಜನೆಯ ವೈಫಲ್ಯ: ಸಾರ್ವಜನಿಕ ವಲಯದಲ್ಲಿ ತೀವ್ರ ಅಸಮಾಧಾನ

ಒಂದೆಡೆ ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತು ಗಂಭೀರ ಚರ್ಚೆ ನಡೆದ-ರೆ, ಇನ್ನೊಂದೆಡೆ ಕಾರ್ಯಕ್ರಮದ ಸಂಘಟನೆ ಮತ್ತು ಶಿಷ್ಟಾಚಾರದ (ಪ್ರೋಟೋಕಾಲ್) ವಿಚಾರದಲ್ಲಿ ಸಾರ್ವಜನಿಕ ವಲಯದಿಂದ ತೀವ್ರ ಆಕ್ಷೇಪಣೆಗಳು ವ್ಯಕ್ತವಾಗಿವೆ.

**ಅತಿಥಿಗಳಿಗೆ ಸಿಗದ ಗೌರವ:** ವೇದಿಕೆಯಲ್ಲಿದ್ದ ತಾಲೂಕು ಮಟ್ಟದ ಅಧಿಕಾರಿಗಳು, ಗಣ್ಯರು ಹಾಗೂ ವಿಶೇಷ ಉಪನ್ಯಾಸ ನೀಡಲು ಆಗಮಿಸಿದ್ದ ನಿವೃತ್ತ ಉಪನ್ಯಾಸಕರಿಗೆ ಸಾಂಪ್ರದಾಯಿಕವಾಗಿ ಹೂಗುಚ್ಛ ಅಥವಾ ಸನ್ಮಾನ ನೀಡಿ ಗೌರವಿಸದಿರುವುದು ಉಪಸ್ಥಿತರಿದ್ದವರ ಅಸಮಾಧಾನಕ್ಕೆ ಕಾರಣವಾಯಿತು.

**ಪಾರದರ್ಶಕತೆಗೆ ಆಗ್ರಹ:** ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಈ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಸರ್ಕಾರಿ ಅನುದಾನ, ವೆಚ್ಚದ ವಿವರಗಳು ಹಾಗೂ ಸೌಲಭ್ಯಗಳ ಬಳಕೆಯ ಕುರಿತು ಪಾರದರ್ಶಕ ಮಾಹಿತಿ ನೀಡಬೇಕು ಎಂಬ ಆಗ್ರಹ ಕೇಳಿಬಂದಿದೆ.

ತನಿಖೆಗೆ ಒತ್ತಾಯ: ಕಾರ್ಯಕ್ರಮದ ಅನುದಾನದ ಬಳಕೆಯಲ್ಲಿ ಲೋಪದೋಷಗಳಿವೆಯೇ ಎಂಬ ಬಗ್ಗೆ ಸೂಕ್ತ ಪರಿಶೀಲನೆ ನಡೆಸಬೇಕೆಂದು ಕೆಲವರು ಆಗ್ರಹಿಸಿದ್ದಾರೆ. ಆದರೆ, ಅಧಿಕೃತ ಮಾಹಿತಿಯಿಲ್ಲದೆ ಕೇವಲ ಸಂಘಟನಾತ್ಮಕ ಲೋಪಗಳನ್ನೇ ಭ್ರಷ್ಟಾಚಾರವೆಂದು ತೀರ್ಮಾನಿಸಲು ಸಾಧ್ಯವಿಲ್ಲ ಎಂಬ ಮಾತುಗಳೂ ಕೇಳಿಬಂದಿವೆ.

**ಪರಿಸರ ಸ್ನೇಹಿ ನಡೆ ಮತ್ತು ಶಿಷ್ಟಾಚಾರದ ಕಾಳಜಿ:** ಸಾಮಾನ್ಯವಾಗಿ ತಾಲೂಕು ಆಡಳಿತದ ಕಾರ್ಯಕ್ರಮಗಳಲ್ಲಿ ತಹಶೀಲ್ದಾರ್ ಕೆ. ನಾಗರಾಜ್ ಅವರು ಹೂಗುಚ್ಛಗಳ ಬದಲಾಗಿ ಸಸಿಗಳನ್ನು ನೀಡುವ ಮೂಲಕ ಪರಿಸರ ಜಾಗೃತಿಯ ಹೊಸ ಪರಂಪರೆಗೆ ಮುನ್ನುಡಿ ಬರೆದಿದ್ದರು. ಆದ-ರೆ, ಪ್ರಜಾಪ್ರಭುತ್ವ ದಿನಾಚರಣೆಯಂತಹ ಸುದಿನದಂದು ಆಯೋಜಕರು ಕನಿಷ್ಠ ಸೌಜನ್ಯ ಹಾಗೂ ಶಿಷ್ಟಾಚಾರವನ್ನು ಪಾಲಿಸಬೇಕಿತ್ತು ಎಂಬುದು ನಾಗರಿಕ ಅಭಿಪ್ರಾಯವಾಗಿದೆ.

ಒಟ್ಟಾರೆಯಾಗಿ, ಪ್ರಜಾಪ್ರಭುತ್ವ ದಿನಾಚರಣೆಯು ಕೇವಲ ಒಂದು ಸಾಂಪ್ರದಾಯಿಕ ಸರ್ಕಾರಿ ಕಾರ್ಯಕ್ರಮವಾಗಿ ಮುಕ್ತಾಯಗೊಳ್ಳದೆ, ಸಂವಿಧಾನಿಕ ಮೌಲ್ಯಗಳನ್ನು ತಲುಪಿಸುವ ಜೊತೆಗೆ ಆಡಳಿತಾತ್ಮಕ ಪಾರದರ್ಶಕತೆ ಮತ್ತು ಗೌರವದ ಸಾಂಕೇತಿಕ ವೇದಿಕೆಯಾಗಬೇಕಿದೆ.

# ಗದಗ-ಹರಪನಹಳ್ಳಿ ರೈಲ್ವೆ ಮಾರ್ಗ ಅನುಷ್ಠಾನಕ್ಕೆ ಆಗ್ರಹ

## ಅಕ್ಟೋಬರ್ 5ರಂದು ತುಮಕೂರು ಸಂಸದರ ಕಛೇರಿ ಎದುರು ಪ್ರತಿಭಟನೆಗೆ ತೀರ್ಮಾನ

**ಸತ್ಯಮಿಥ್ಯ ಸುದ್ದಿಮೂಲ ಮುಂಡರಗಿ:**

ಗದಗ-ಹರಪನಹಳ್ಳಿ ರೈಲ್ವೆ ಮಾರ್ಗವನ್ನು ಮುಂಡರಗಿ ಮತ್ತು ಹೂವಿನ ಹಡಗಲಿ ಮಾರ್ಗವಾಗಿ ಅನುಷ್ಠಾನಗೊಳಿಸಬೇಕೆಂದು ಆಗ್ರಹಿಸಿ ತುಮಕೂರು ಲೋಕಸಭಾ ಕ್ಷೇತ್ರದ ಸಂಸದರ ಕಛೇರಿ ಎದುರು ಪ್ರತಿಭಟನೆ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಕರ್ನಾಟಕ ರಾಜ್ಯ ಸಾರ್ವಜನಿಕ ಹೋರಾಟ ವೇದಿಕೆ, ಗದಗ-ಹರಪನಹಳ್ಳಿ ರೈಲ್ವೆ ಮಾರ್ಗ ರಚನೆಯ ಜಂಟಿ ಕ್ರಿಯಾ ಸಮಿತಿ ಹಾಗೂ ಅದ್ವಿಕ ವಿವಿಧೋದ್ದೇಶಗಳ ಅಭಿವೃದ್ಧಿ ಸಂಘ (ರಿ) ಮುಂಡರಗಿ ರವರ ಆಶ್ರಯದಲ್ಲಿ ಮಂಗಳವಾರದಂದು ಸಭೆ ನಡೆಸಿ ಈ ನಿರ್ಧಾರ ಕೈಗೊಳ್ಳಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಗದಗ-ಹರಪನಹಳ್ಳಿ ರೈಲ್ವೆ ಮಾರ್ಗ ರಚನೆಯ ಜಂಟಿ ಕ್ರಿಯಾ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಬಸವರಾಜ ನವಲಗುಂದ ಅವರು, "ಕೇಂದ್ರ ರೈಲ್ವೆ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರಿಗೆ ದಿನಾಂಕ 19/11/2024ರಂದು ಅವರ ತುಮಕೂರು ಸಂಸದರ ಕಛೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಪತ್ರ ಸಲ್ಲಿಸಲಾಗಿತ್ತು. ಸುಮಾರು 17 ವರ್ಷಗಳಿಂದ ಈ ರೈಲ್ವೆ ಮಾರ್ಗಕ್ಕಾಗಿ ನಿರಂತರವಾಗಿ ಹೋರಾಟ ನಡೆಸುತ್ತಿದ್ದರೂ, 2 ವರ್ಷ ಕಳೆದರೂ ಸಾರ್ವಜನಿಕರ ಮನವಿಗೆ ಮರುಉತ್ತರ ನೀಡದಿರುವುದು ಅವರ ಜನವಿರೋಧಿ ನೀತಿಯಾಗಿದೆ," ಎಂದು ಖಂಡಿಸಿದರು.

ಈ ಹಿನ್ನೆಲೆಯಲ್ಲಿ ಜನಕಲ್ಯಾಣ ಯಾತ್ರೆ, ಅಸಹಕಾರ ಚಳುವಳಿ ಮತ್ತು ಅನಿರ್ದಿಷ್ಟ ಧರಣಿ ಸತ್ಯಾಗ್ರಹದ ಮುಂದುವರಿದ ಭಾಗವಾಗಿ, ದಿನಾಂಕ 04/10/2026ರ ಸೋಮವಾರದಂದು ಮುಂಡರಗಿಯಿಂದ 'ತುಮಕೂರು ಚಲೋ' ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ತದನಂತರ, ದಿನಾಂಕ 05/10/2026ರ ಮಂಗಳವಾರ ಬೆಳಿಗ್ಗೆ 11:00 ಗಂಟೆಗೆ ರಾಜ್ಯ ರೈಲ್ವೆ ಮಂತ್ರಿ ಹಾಗೂ ತುಮಕೂರು ಸಂಸದರಾದ ವಿ. ಸೋಮಣ್ಣನವರ ಕಛೇರಿ ಎದುರು ಪ್ರತಿಭಟನೆ ನಡೆಸಲು ನವಲಗುಂದರವರ ಮನೆಯಲ್ಲಿ ನಡೆದ ಸಭೆಯಲ್ಲಿ ಸರ್ವ ಕಾರ್ಯಕರ್ತರು ಒಮ್ಮತದಿಂದ ಠರಾವು ಅಂಗೀಕರಿಸಿದ್ದಾರೆ. ಈ ಸಭೆಯಲ್ಲಿ ಯಮನಪ್ಪ ಭಜಂತ್ರಿ, ಬಸಪ್ಪ ವಡ್ಡರ, ಜಗದೀಶ ಕಂಚಗಾರ, ಶಿವಕುಮಾರ ಅಳವಂಡಿ, ಮಂಜುನಾಥ ಪಾಟೀಲ, ವೀರಭದ್ರಪ್ಪ ಕಬ್ಬಿಣದ, ಸುರೇಶ ಕುಂಬಾರ, ರಶೀದ್ಸಾಬ್ ಹೊಸಪೇಟೆ ಹಾಗೂ ರಿಯಾಜ್ ಅಳವಂಡಿ ಮುಂತಾದವರು ಉಪಸ್ಥಿತರಿದ್ದರು ಎಂದು ಗದಗ-ಹರಪನಹಳ್ಳಿ ರೈಲ್ವೆ ಮಾರ್ಗ ರಚನೆಯ ಜಂಟಿ ಕ್ರಿಯಾ ಸಮಿತಿಯ ಉಪಾಧ್ಯಕ್ಷ ರವಿಗೌಡ ವೆಂಕನಗೌಡ ಪಾಟೀಲ ಅವರು ತಿಳಿಸಿದ್ದಾರೆ.




# ಕುಷ್ಟಗಿ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ಆಗ್ರಹ

**ಸತ್ಯಮಿಥ್ಯ ಸುದ್ದಿಮೂಲ ಕುಷ್ಟಗಿ:**

ಕುಷ್ಟಗಿ ತಾಲೂಕನ್ನು ತಕ್ಷಣವೇ ಬರಪೀಡಿತ ಪ್ರದೇಶವೆಂದು ಘೋಷಿಸಬೇಕು ಹಾಗೂ ಬರದಿಂದ ಸಂಕಷ್ಟಕ್ಕೊಳಗಾಗಿರುವ ರೈತರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿ ಬಿಜೆಪಿ ಪಕ್ಷದ ವತಿಯಿಂದ ಬುಧವಾರ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಕುಷ್ಟಗಿ ಶಾಸಕ ದೊಡ್ಡನಗೌಡ ಹೆಚ್. ಪಾಟೀಲ ಅವರ ನೇತೃತ್ವದಲ್ಲಿ ಈ ಪ್ರತಿಭಟನೆ ನಡೆಯಿತು. ಹೋರಾಟಕ್ಕೆ ಮಾಜಿ ಸಚಿವ ರಾಜುಗೌಡ ನಾಯಕ ಅವರು ಬೆಂಬಲ ಸೂಚಿಸಿ ಭಾಗವಹಿಸಿದ್ದರು.

ತಾಲ್ಲೂಕಿನಲ್ಲಿ ಮಳೆ ಕೊರತೆಯಿಂದ ರೈತರು ಎದುರಿಸುತ್ತಿರುವ ತೀವ್ರ ಸಮಸ್ಯೆಗಳು, ಬೆಳೆ ನಷ್ಟ ಹಾಗೂ ಕುಡಿಯುವ ನೀರಿನ ಅಭಾವ ಸೇರಿದಂತೆ ವಿವಿಧ ವಿಚಾರಗಳ ಕುರಿತು ಪ್ರತಿಭಟನಾಕಾರರು ಸರ್ಕಾರದ ಗಮನ ಸೆಳೆದರು. ತಾಲ್ಲೂಕನ್ನು ತಕ್ಷಣವೇ ಬರಪೀಡಿತ ಪ್ರದೇಶವೆಂದು ಘೋಷಿಸಿ, ಸಂಕಷ್ಟದಲ್ಲಿರುವ ರೈತರಿಗೆ ಅಗತ್ಯ ಪರಿಹಾರ ಮತ್ತು ಸೂಕ್ತ ನೆರವು ನೀಡಬೇಕು ಎಂದು ಆಗ್ರಹಿಸಿದರು. ಈ ಪ್ರತಿಭಟನೆಯಲ್ಲಿ ಬಿಜೆಪಿ ಮಂಡಲದ ಮಾಜಿ ಅಧ್ಯಕ್ಷ ಬಸವರಾಜ ಹಳ್ಳೂರ, ಕೆ. ಮಹೇಶ, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರಾದ ಮರಿಯಪ್ಪ, ಮಹಾಂತೇಶ ಗಣವಾರಿ, ಗೋತಗಿ, ಸಂಗಮೇಶ ಕರಡಿ, ರಮೇಶ ಕೊಳ್ಳಿ, ಮುತ್ತಣ್ಣ ವಾಲಿಕಾರ ಹಾಗೂ ಬಿಜೆಪಿಯ ನೂರಾರು ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು.




# ಮಳೆ ಅವಲಂಬಿತ ಕೃಷಿಯಿಂದ ರೈತರ ಗೋಳು

## ಬೆಳೆ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿರುವ ಸಮಗ್ರ ಕೃಷಿಕ ಡಾ. ಶೌಕತ್ ಅಲಿ ಲಂಬೂನವರ

**ಸತ್ಯಮಿಥ್ಯ ಸುದ್ದಿಮೂಲ ನವಲಗುಂದ:**

ಈ ವರ್ಷ ಮಳೆ ಕೊರತೆಯಿಂದ ಬರದ ಪರಿಸ್ಥಿತಿ ನಿರ್ಮಾಣವಾಗಿದ್ದು, ಮಳೆ ಅವಲಂಬಿತ ಕೃಷಿ ಮಾಡುತ್ತಿರುವ ರೈತರು ಬೆಳೆಗಳನ್ನು ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ. ಸಮರ್ಪಕ ಮಳೆಯಾಗದೆ ಬೆಳೆಗಳು ಒಣಗುವ ಹಂತಕ್ಕೆ ತಲುಪಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂತಹ ರೈತರಲ್ಲಿ ಒಬ್ಬರಾದ ಡಾ. ಶೌಕತ್ ಅಲಿ ಲಂಬೂನವರ ಅವರು ಕಳೆದ ಐದು ವರ್ಷಗಳಿಂದ ಮಳೆ ಆಶ್ರಿತ ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ತಮ್ಮ ಕೃಷಿ ಜಮೀನಿನಲ್ಲಿ ಅರಣ್ಯ ಕೃಷಿ, ತೋಟಗಾರಿಕೆ, ಮೀನುಗಾರಿಕೆ ಹಾಗೂ ಕೋಳಿ ಸಾಕಾಣಿಕೆಯನ್ನು ಸಮನ್ವಯಗೊಳಿಸಿಕೊಂಡು ಕೃಷಿ ಚಟುವಟಿಕೆ ನಡೆಸುತ್ತಿದ್ದಾರೆ.




ಆದರೆ ಈ ವರ್ಷ ಮಳೆ ಕೊರತೆಯಿಂದ ಸಮಗ್ರ ಕೃಷಿಯ ಮೇಲೂ ಪ್ರತಿಕೂಲ ಪರಿಣಾಮ ಬೀರಿದೆ. ಬೆಳೆಗಳನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಡಾ. ಶೌಕತ್ ಅಲಿ ಲಂಬೂನವರ ಅವರು ಕೊಡಗಳ ಮೂಲಕ ನೀರು ತಂದು ಬೆಳೆಗಳಿಗೆ ಹಾಕುವ ಮೂಲಕ ಸಂರಕ್ಷಣೆ ಮಾಡುತ್ತಿದ್ದಾರೆ. ಮಳೆ ಕೈಕೊಟ್ಟಿರುವ ಹಿನ್ನೆಲೆಯಲ್ಲಿ ನೀರಿನ ಕೊರತೆ ಎದುರಾಗಿದ್ದು, ಬೆಳೆ ಉಳಿಸಿಕೊಳ್ಳುವುದೇ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಈ ಕುರಿತು ಮಾತನಾಡಿದ ಡಾ. ಶೌಕತ್ ಅಲಿ ಲಂಬೂನವರ, "ಮಳೆ ಆಶ್ರಿತ ಸಮಗ್ರ ಕೃಷಿಯನ್ನು ಮಾಡುತ್ತಿದ್ದು, ಈ ವರ್ಷ ಮುಂಗಾರು ಮಳೆಯೂ ಸಮರ್ಪಕವಾಗಿ ಆಗಿಲ್ಲ. ಇದರಿಂದ ಮೆಣಸಿನಕಾಯಿ ಸೇರಿದಂತೆ ಹಲವು ಬೆಳೆಗಳು ಒಣಗುವ ಹಂತಕ್ಕೆ ತಲುಪಿವೆ. ಮೀನುಗಾರಿಕೆ ಹಾಗೂ ಕೋಳಿ ಸಾಕಾಣಿಕೆಗೂ ನೀರಿನ ಅಭಾವ ಉಂಟಾಗಿದೆ. ಹಿಂಗಾರು ಮಳೆಯ ಮೇಲೆಯೇ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದ್ದೇವೆ" ಎಂದು ತಿಳಿಸಿದರು.

ಮಳೆ ಅವಲಂಬಿತ ಕೃಷಿ ಮಾಡುವ ರೈತರಿಗೆ ಈ ವರ್ಷ ಸಂಕಷ್ಟದ ಪರಿಸ್ಥಿತಿ ಎದುರಾಗಿದ್ದು, ಬೆಳೆಗಳನ್ನು ಉಳಿಸಿಕೊಳ್ಳಲು ಹೆಚ್ಚುವರಿ ಶ್ರಮ ಹಾಗೂ ವೆಚ್ಚ ಮಾಡಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ಮಳೆ ಕೈಕೊಟ್ಟಿರುವ ಹಿನ್ನೆಲೆಯಲ್ಲಿ ಕೃಷಿ ಚಟುವಟಿಕೆಗಳ ಮೇಲೆ ಪರಿಣಾಮ ಬೀರುವುದರ ಜೊತೆ-ಗೆ, ಸಮಗ್ರ ಕೃಷಿ ಪದ್ಧತಿ ಅನುಸರಿಸುತ್ತಿರುವ ರೈತರೂ ನೀರಿನ ಕೊರತೆಯಿಂದ ತೊಂದರೆ ಅನುಭವಿಸುವಂತಾಗಿದೆ.

# ರೈತರಿಂದ ಖರೀದಿಸಿದ ಕಡಲೆಗೆ 1.50 ಕೋಟಿ ಬಾಕಿ: ಹಣಕ್ಕಾಗಿ ರೈತರ ಪರದಾಟ

**ಸತ್ಯಮಿಥ್ಯ ಸುದ್ದಿಮೂಲ ಗದಗ:**

ಜಿಲ್ಲೆಯ ರೋಣ ತಾಲೂಕಿನ ಸಮೀಪದ ಹೊಸಳ್ಳಿ ಗ್ರಾಮದ ರೈತರಿಂದ 2025-26ನೇ ಸಾಲಿನ ಕಡಲೆ ಬೆಳೆಯನ್ನು ಖರೀದಿಸಿ, ಸುಮಾರು ₹1.50 ಕೋಟಿ ಹಣವನ್ನು ಪಾವತಿಸದೆ ವಂಚಿಸಲಾಗಿದೆ ಎಂದು ಸೂಡಿ ಗ್ರಾಮದ ಈರಣ್ಣ ಸಂಗಳದ ಎಂಬುವವರ ವಿರುದ್ಧ ರೈತರು ಆರೋಪಿಸಿದ್ದಾರೆ.

ರೈತರ ಹೇಳಿಕೆಯಂತೆ, ಕಡಲೆ ಖರೀದಿಸಿದ ಬಳಿಕ ಹಣದ ಬದಲಾಗಿ ಚೆಕ್‌ಗಳನ್ನು ನೀಡಲಾಗಿತ್ತು. ಆದರೆ, ಚೆಕ್‌ಗಳನ್ನು ಬ್ಯಾಂಕ್‌ಗೆ ಜಮಾ ಮಾಡಿದಾಗ ಖಾತೆಯಲ್ಲಿ ಸಮರ್ಪಕ ಹಣವಿಲ್ಲದ ಕಾರಣ ಅವು ನಗದಾಗಿಲ್ಲ ಎಂದು ರೈತರು ತಿಳಿಸಿದ್ದಾರೆ. ಇದ-ರಿಂದ ಬೆಳೆ ಮಾರಾಟ ಮಾಡಿದರೂ ಹಣ ಕೈಗೆ ಬಾರದ ಸ್ಥಿತಿ ನಿರ್ಮಾಣವಾಗಿದ್ದು, ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಈ ಕುರಿತು ರೈತರು ಜೂ. 2, 2026ರಂದು ನರೇಗಲ್ ಪೊಲೀಸ್ ಠಾಣೆಗೆ ತೆರಳಿ ದೂರು ಸಲ್ಲಿಸಿದ್ದರು. ಈ ಸಂದರ್ಭದಲ್ಲಿ ಆ.15, 2026ರೊಳಗೆ ಹಣ ಪಾವತಿಸುವುದಾಗಿ ಈರಣ್ಣ ಸಂಗಳದ ಅವರು ಒಪ್ಪಿಗೆ ಪತ್ರ ನೀಡಿದ್ದರು ಎಂದು ರೈತರು ತಿಳಿಸಿದ್ದಾರೆ. ಆದರೆ, ನಿಗದಿತ ಅವಧಿ ಮುಗಿದರೂ ಇದುವರೆಗೆ ಹಣ ಪಾವತಿಯಾಗಿಲ್ಲ ಎಂದು ದೂರಿದ್ದಾರೆ.

ಕೃಷಿ ಚಟುವಟಿಕೆಗಳಿಗೆ ಬಿತ್ತನೆ ಬೀಜ, ಗೊಬ್ಬರ, ಕೃಷಿ ಕಾರ್ಮಿಕರು ಸೇರಿದಂತೆ ವಿವಿಧ ವೆಚ್ಚಗಳನ್ನು ಸಾಲ ಮಾಡಿ ನಿರ್ವಹಿಸಿರುವ ರೈತರಿಗೆ, ಬೆಳೆ ಮಾರಾಟದ ಹಣವೂ ಸಿಗದಿರುವುದರಿಂದ ಕುಟುಂಬದ ಆರ್ಥಿಕ ನಿರ್ವಹಣೆ ಕಷ್ಟಕರವಾಗಿದೆ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.



ಹೊಸಳ್ಳಿ ಗ್ರಾಮದ ರೈತರಲ್ಲದೆ, ಸಮೀಪದ ಇಟಗಿ, ಸೂಡಿ ಸೇರಿದಂತೆ ಹಲವು ಗ್ರಾಮಗಳ ರೈತರಿಂದಲೂ ಕಡಲೆ ಖರೀದಿಸಿ ಹಣ ಪಾವತಿಸಿಲ್ಲ ಎಂದು ರೈತರು ಆರೋಪಿಸಿದ್ದಾರೆ.

ಕಡಲೆ ಖರೀದಿ ಹಾಗೂ ಹಣ ಪಾವತಿಸದಿರುವ ಕುರಿತು ಆ.20ರಂದು ನರೇಗಲ್ ಪೊಲೀಸ್ ಠಾಣೆಗೆ ತೆರಳಿ ದೂರು ಸಲ್ಲಿಸಲು ಮುಂದಾಗಿದ್ದು, ಆ.27ರಂದು ಮತ್ತೊಮ್ಮೆ ಠಾಣೆಗೆ ತೆರಳಿದ್ದರೂ ಈರಣ್ಣ ಸಂಗಳದ ಅವರ ವಿರುದ್ಧ ಇದುವರೆಗೆ ಪ್ರಕರಣ ದಾಖಲಿಸಿಲ್ಲ ಎಂದು ರೈತರು ಆರೋಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವೀರಯ್ಯ ಹಿರೇಮಠ, ಬಸಪ್ಪ ಮಾರನಬಸರಿ, ಶರಣಪ್ಪ ಕವಲೂರ್, ಪರಸಪ್ಪ ಕುರಿ, ಮಲ್ಲಪ್ಪ ಹಳ್ಳಿ, ಬಸಪ್ಪ ಸವಡಿ, ಬಸಪ್ಪ ರಾಮಪ್ಪ ಸವಾಡಿ, ಯಮನಪ್ಪ ವೆದಗೊಳ, ಅಂದಪ್ಪ ಮರಗಣ್ಣವರ, ಬಸಪ್ಪ ಮಡಿವಾಳರ, ಬಸವರಾಜ ಕುರಿ, ವಿಶ್ವನಾಥ ಸವಡಿ, ಬಸಪ್ಪ ಸವಡಿ, ಅಡಿಬಪ್ಪ ದಳವಾಯಿ, ಶಿವಯ್ಯ ಪೂಜಾರ್, ಮಹಬೂಬ್ ಹೊಸಳ್ಳಿ, ಶರಣಪ್ಪ ಗೂಳರೆಡ್ಡಿ ಹಾಗೂ ಯಮನಪ್ಪ ಮಾದರ್ ಸೇರಿದಂತೆ ರೈತರು ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಗೆ ತೆರಳಿ ದೂರು ಸಲ್ಲಿಸಿದ್ದಾರೆ.

ತಮ್ಮಿಂದ ಖರೀದಿಸಿದ ಕಡಲೆ ಬೆಳೆಯ ಹಣವನ್ನು ವಸೂಲಿ ಮಾಡಿಸಿಕೊಟ್ಟು, ಪ್ರಕರಣದ ಕುರಿತು ಸೂಕ್ತ ತನಿಖೆ ನಡೆಸಿ ನ್ಯಾಯ ಒದಗಿಸಬೇಕು ಎಂದು ರೈತರು ಪೊಲೀಸ್ ಇಲಾಖೆಗೆ ಮನವಿ ಮಾಡಿದ್ದಾರೆ. ಈರಣ್ಣ ಸಂಗಳದ ಅವರು ಎಲ್ಲಿಯಾದರೂ ಕಂಡುಬಂದಲ್ಲಿ ತಮ್ಮ ಮಾಹಿತಿ ನೀಡುವಂತೆ ರೈತರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಮಾಹಿತಿ ನೀಡಲು 96863 07982, 98801 73509 ದೂರವಾಣಿ ಸಂಖ್ಯೆಗೆ ಸಂಪರ್ಕಿಸುವಂತೆ ತಿಳಿಸಿದ್ದಾರೆ.



ರೋಣ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರತಿಷ್ಠಾಪನೆಗೊಂಡ ವಿಘ್ನ ವಿನಾಶಕ.

# ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ವಾರ್ಷಿಕ ಸಭೆ 25ರಂದು

ರೋಣ: ತಾಲೂಕಿನ ಹಿರೇಹಾಳ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ 2025- 26ನೇ ಸಾಲಿನ ವಾರ್ಷಿಕ ಮಹಾಸಭೆಯು ಸೆ. 25ರಂದು ಮಧ್ಯಾಹ್ನ 3 ಗಂಟೆಗೆ ಸಂಘದ ಗೋಡೌನ್‌ನಲ್ಲಿ ಸಂಘದ ಅಧ್ಯಕ್ಷ ಚನ್ನಬಸಪ್ಪ ಸದಾಶಿವಪ್ಪ ರಡ್ಡೇರ (ಬೆಟಗೇರಿ) ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

# 25 ವರ್ಷಗಳ ಬಳಿಕ ಕೂಡಿದ ಗೆಳೆಯರು; ಗುರುಗಳ ಕಂಡು ಬಾವುಕರಾದರು...

## ಶಾಲೆಯಂಗಳದಲ್ಲಿ ಮತ್ತೆ ಬಾಲ್ಯದ ಹೆಜ್ಜೆಗುರುತು; ಗುರು-ಶಿಷ್ಯರ ಬಾಂಧವ್ಯಕ್ಕೆ ಸಾಕ್ಷಿಯಾದ ಸ್ನೇಹ ಸಮ್ಮೇಳನ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಒಂದೇ ಬೆಂಚಿನಲ್ಲಿ ಕುಳಿತು ಅಕ್ಷರ ಕಲಿತವರು ಒಂದೇ ಮೈದಾನದಲ್ಲಿ ಓಡಿ-ಆಡಿ ಬಾಲ್ಯ ಕಳೆದವರು ಶಿಕ್ಷಕರ ಗದರಿಕೆಗೆ ಒಟ್ಟಾಗಿ ತಲೆತಗ್ಗಿಸಿದವರು ಶಾಲೆಯ ಗಂಟೆಯ ಸದ್ದಿಗೆ ತರಗತಿಗೆ ಓಡಿದವರು ಬದುಕಿನ ಜಂಜಾಟದಲ್ಲಿ ಇಂದು ಬೇರೆ ಬೇರೆ ದಾರಿಗಳಲ್ಲಿ ಸಾಗುತ್ತಿದ್ದರೂ, ಶಾಲೆಯ ನೆನಪು ಎಂಬ ಅದೃಶ್ಯ ನಂಟು 25 ವರ್ಷಗಳ ಬಳಿಕ ಮತ್ತೆ ಎಲ್ಲರನ್ನೂ ಒಂದೇ ಅಂಗಳಕ್ಕೆ ಕರೆತಂದ ಅಪರೂಪದ ಕ್ಷಣ ನರೇಗಲ್ಲಿನಲ್ಲಿ ಸಾಕ್ಷಿಯಾಯಿತು.

ಇಲ್ಲಿಯ ಶ್ರೀ ಅನ್ನದಾನ ವಿಜಯ ಬಾಲಕರ ಪ್ರೌಢಶಾಲೆಯ 2001-02ನೇ ಸಾಲಿನ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮೇಳನ ಹಾಗೂ ಗುರುವಂದನಾ ಕಾರ್ಯಕ್ರಮ ಶ್ರೀ ಅನ್ನದಾನೇಶ್ವರ ಶಿವಾನುಭವ ಮಂಟಪದಲ್ಲಿ ರವಿವಾರ ಭಾವನಾತ್ಮಕ ವಾತಾವರಣದಲ್ಲಿ ಜರುಗಿತು.

25 ವರ್ಷಗಳ ಬಳಿಕ ಪರಸ್ಪರ ಮುಖಾಮುಖಿಯಾದ ಹಳೆಯ ಗೆಳೆಯರು ಒಬ್ಬರನ್ನೊಬ್ಬರು ಅಪ್ಪಿಕೊಂಡು, ಬಾಲ್ಯದ ದಿನಗಳನ್ನು ನೆನಪಿಸಿಕೊಂಡ ಕ್ಷಣಗಳು ಕಾರ್ಯಕ್ರಮದ ವಿಶೇಷತೆಯಾಗಿದ್ದವು. 'ನನ್ನ ನೆನಪಿದೆಯಾ?', 'ಅಂದು ಮಾಡುತ್ತಿದ್ದ ಕಿತಾಪತಿ ನೆನಪಿದೆಯಾ?', 'ನಮ್ಮ ಬೆಂಚು ಎಲ್ಲಿತ್ತು ಗೊತ್ತಾ?' ಎಂಬ ಆತ್ಮೀಯ ಮಾತುಗಳು ಮಂಟಪದಲ್ಲಿ ನಗುವಿನ ಅಲೆ ಎಬ್ಬಿಸಿದವು. ಕೆಲವರು ಹಳೆಯ ಕಿತಾಪತಿಗಳನ್ನು ನೆನಪಿಸಿಕೊಂಡು ನಕ್ಕರೆ, ಮತ್ತೆ ಕೆಲವರ ಕಣ್ಣಂಚಿನಲ್ಲಿ ಸಂತಸದ ಆನಂದಭಾಷ್ಪ ಜಿನುಗಿತು.

ಬದುಕಿನಲ್ಲಿ ಎಷ್ಟೇ ಎತ್ತರಕ್ಕೆ ಬೆಳೆದರೂ, ತಮ್ಮನ್ನು ರೂಪಿಸಿದ ಶಾಲೆ ಹಾಗೂ ಗುರುಗಳನ್ನು ಮರೆಯಲು ಸಾಧ್ಯವಿಲ್ಲ ಎಂಬ ಭಾವ ಪ್ರತಿಯೊಬ್ಬರ ಮಾತಿನಲ್ಲೂ ಪ್ರತಿಧ್ವನಿಸಿತು. ಅಕ್ಷರದ ಜತೆಗೆ ಶಿಸ್ತು, ಸಂಸ್ಕಾರ, ಮಾನವೀಯತೆ ಹಾಗೂ ಬದುಕಿನ ದಾರಿಯನ್ನು ತೋರಿಸಿದ ಗುರುಗಳನ್ನು ವರ್ಷಗಳ ಬಳಿಕ ಕಂಡಾಗ ಹಳೆಯ ವಿದ್ಯಾರ್ಥಿಗಳ ಕಣ್ಣಾಲಿಗಳು ತುಂಬಿದವು.

ಒಮ್ಮೆ ತಮ್ಮ ಮುಂದೆ ಮುಗ್ಧ ಬಾಲಕರಾಗಿ ಕುಳಿತು ಪಾಠ ಕೇಳುತ್ತಿದ್ದ ವಿದ್ಯಾರ್ಥಿಗಳು, 25 ವರ್ಷಗಳ ಬಳಿಕ ತಮ್ಮನ್ನು ಗೌರವದಿಂದ ಸನ್ಮಾನಿಸುತ್ತಿರುವುದನ್ನು ಕಂಡ ಶಿಕ್ಷಕರ ಮುಖದಲ್ಲೂ ಸಂತೃಪ್ತಿ ಹಾಗೂ ಹೆಮ್ಮೆಯ ಭಾವ ಮೂಡಿತು. ಆ ಕ್ಷಣದಲ್ಲಿ ಗುರು-ಶಿಷ್ಯರ ನಡುವಿನ ಕಾಲದ ಅಂತರವೇ ಕರಗಿದಂತೆ ಭಾಸವಾಯಿತು.




ತಮ್ಮ ವಿದ್ಯಾರ್ಥಿ ಜೀವನಕ್ಕೆ ದಿಕ್ಕು ತೋರಿದ ಮುಖ್ಯ ಶಿಕ್ಷಕ/ಕಿಯರಾದ ಎಸ್.ಎನ್. ಹೂಲಗೇರಿ, ಎಂ.ಬಿ. ಸಜ್ಜನರ, ಎಂ.ವಿ. ವೀರಾಪುರ ಹಾಗೂ ನಿವೃತ್ತ ಮುಖ್ಯ ಶಿಕ್ಷಕ ಎಸ್.ಎಚ್. ಅಬ್ಬಿಗೇರಿ ಅವರನ್ನು ಹಳೆಯ ವಿದ್ಯಾರ್ಥಿಗಳು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು.

ನಿವೃತ್ತ ಶಿಕ್ಷಕರಾದ ಕೆ.ಪಿ. ರಾಠೋಡ, ಎಚ್.ಎಂ. ರತ್ನಮ್ಮ, ಆರ್.ಎಂ. ನದಾಫ, ಎಸ್.ಎನ್. ಬ್ಯಾಡಗಿ, ಟಿ.ಬಿ. ಆಡೂರ, ಎ.ಎಂ. ರಾಠೋಡ, ಆರ್.ಕೆ. ರಡೇರ, ಎಂ.ವಿ. ಬಿಂಗಿ, ಎಲ್.ಎನ್. ನಾಯಕ, ಆರ್.ಎಂ. ಶಿಳ್ಳಿನ, ಐ. ಜ್ಞಾನೇಶ್ವರಿ, ಎಂ.ಎಂ. ಗುಗ್ಗರಿ, ಎಸ್.ಕೆ. ಗಾಣಿಗೇರ ಹಾಗೂ ಎಸ್.ಬಿ. ಬೂದಿಹಾಳ ಸೇರಿದಂತೆ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಶಾಲೆಯ ದಿನಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಹೆಜ್ಜೆ ಹಾಕಿದ ಶಿಕ್ಷಕೇತರ ಸಿಬ್ಬಂದಿಯ ಸೇವೆಯನ್ನೂ ಹಳೆಯ ವಿದ್ಯಾರ್ಥಿಗಳು ಮರೆಯಲಿಲ್ಲ. ನಿವೃತ್ತ ಕರಣಿಕರಾದ ಎಸ್.ಕೆ. ಪಾಟೀಲ, ಎಚ್.ಟಿ. ಬಂಡಿವಡ್ಡರ, ನಿವೃತ್ತ ಆಟೆಂಡರ್ ಬಿ.ಬಿ. ಮಡಿವಾಳರ, ಸಿಪಾಯಿ ಡಿ.ಎಸ್. ಬಂಡಿವಡ್ಡರ, ಡಿ.ವಿ. ಕೋಳಿವಾಡ, ಕಂಪ್ಯೂಟರ್ ಆಪರೇಟರ್ ಎ.ಜೆ. ಹಿರೇಮಠ ಹಾಗೂ ಕಂಪ್ಯೂಟರ್ ಶಿಕ್ಷಕಿ ಶ್ರೀದೇವಿ ಹೊಸಮಠ ಅವರನ್ನು ಸಹ ಗೌರವಿಸಲಾಯಿತು.

ಶಾಲೆಯಲ್ಲಿ ಪಾಠ ಹೇಳಿದವರು ಮಾತ್ರವಲ್ಲ, ಶಾಲೆಯ ವ್ಯವಸ್ಥೆಯ ಹಿಂದೆ ನಿಂತು ಮಕ್ಕಳಿಗೆ ನೆರವಾದ ಪ್ರತಿಯೊಬ್ಬರ ಸೇವೆಯನ್ನೂ ಸ್ಮರಿಸಿದ ಹಳೆಯ ವಿದ್ಯಾರ್ಥಿಗಳ ಈ ನಡೆ ಕಾರ್ಯಕ್ರಮಕ್ಕೆ ಮತ್ತಷ್ಟು ಅರ್ಥ ತುಂಬಿತು.

ಸನ್ಮಾನದ ಕ್ಷಣದಲ್ಲಿ ಕೆಲ ಶಿಕ್ಷಕರು ತಮ್ಮ ಹಳೆಯ ವಿದ್ಯಾರ್ಥಿಗಳನ್ನು ಗುರುತಿಸಿ ಹೆಸರು ಹಿಡಿದು ಮಾತನಾಡಿದಾಗ, ವರ್ಷಗಳ ಹಿಂದಿನ ತರಗತಿಯ ದೃಶ್ಯಗಳು ಮತ್ತೆ ಕಣ್ಣ ಮುಂದೆ ಬಂದವು. 'ಆ ದಿನಗಳೇ ಬೇರೆ ಆ ಸ್ನೇಹವೇ ಬೇರೆ ' ಎಂಬ ಭಾವ ಹಲವರ ಮಾತಿನಲ್ಲಿ ವ್ಯಕ್ತವಾಯಿತು.

ಹಳೆಯ ಗೆಳೆಯರು ಪರಸ್ಪರ ತಮ್ಮ ಕುಟುಂಬ, ಉದ್ಯೋಗ ಹಾಗೂ ಬದುಕಿನ ಪಯಣದ ಕುರಿತು ವಿಚಾರಿಸಿಕೊಂಡು ಸಂತಸ ಹಂಚಿಕೊಂಡರು. ಕೆಲವರು ಶಾಲಾ ದಿನಗಳ ಕಿತಾಪತಿಗಳನ್ನು ಮೆಲುಕು ಹಾಕಿ ನಗೆ ಚಟಾಕಿ ಹಾರಿಸಿದರೆ, ಮತ್ತೆ ಕೆಲವರು ಅಗಲಿದ ಗೆಳೆಯರು ಹಾಗೂ ಶಿಕ್ಷಕರನ್ನು ನೆನೆದು ಭಾವುಕರಾದರು.

ಹಾಲಕೆರೆ-ಗಂಜಿಹಾಳ ಅನ್ನದಾನೇಶ್ವರ ಸಂಸ್ಥಾನಮಠದ ಪೀಠಾಧಿಪತಿ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದ್ದರು. ಡಾ. ಕೆ.ಬಿ. ಧನ್ನೂರ ಕಾರ್ಯಕ್ರಮ ಉದ್ಘಾಟಿಸಿದರು. ಆಡಳಿತ ಮಂಡಳಿ ಸದಸ್ಯರಾದ ಬಸವರಾಜ ಕಳಕಣ್ಣವರ, ಷಣ್ಮುಖಪ್ಪ ಶಿದ್ನೇಕೊಪ್ಪ ಹಾಗೂ ಬಸವರಾಜ ಹೊನ್ನವಾಡ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಗೀತಾ ಬೋಪಳಾಪುರ ಪ್ರಾರ್ಥಿಸಿದರು. ರವಿ ಮುಗಳಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ರವಿ ಹೊಸಮನಿ ಸ್ವಾಗತಿಸಿದರು. ಬಿ.ಎಸ್. ಕಳಕಣ್ಣವರ ನಿರೂಪಿಸಿದರು. ಹಸನಸಾಬ ಕೊಪ್ಪಳ ಸನ್ಮಾನ ಕಾರ್ಯಕ್ರಮ ನಿರ್ವಹಿಸಿದರು. ಶರಣಪ್ಪ ಆನೆಹೊಸೂರು ವಂದಿಸಿದರು.

ಹಳೆಯ ವಿದ್ಯಾರ್ಥಿಗಳಾದ ರಮೇಶ್ ಕೋಲಕಾರ, ಶಕ್ತಿಪ್ರಸಾದ್ ಮೇಟಿ, ನೀಲಪ್ಪ ಗದ್ದಿ, ಯಶವಂತ ಬೇವಿನಕಟ್ಟಿ, ಪಂಪಾಪತಿ ಸಿಂಗನಾಳ, ಗಣೇಶ್ ಗ್ರಾಮಪುರೋಹಿತ್, ಮಾರುತಿ ಕರಮಡಿ, ಜಯಶಂಕರ್ ಬಡಿಗೇರ, ಶಿವಾನಂದ ಪಾಯಪ್ಪಗೌಡ್ರು, ಶಿವಕುಮಾರ್ ರಾಠೋಡ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಒಟ್ಟಿನಲ್ಲಿ, 25 ವರ್ಷಗಳ ಅಂತರದ ಬಳಿಕ ನಡೆದ ಈ ಸ್ನೇಹ ಸಮ್ಮೇಳನ ಕೇವಲ ಹಳೆಯ ವಿದ್ಯಾರ್ಥಿಗಳ ಭೇಟಿಯಾಗಿರಲಿಲ್ಲ; ಅದು ಬಾಲ್ಯವನ್ನು ಮತ್ತೊಮ್ಮೆ ಬದುಕಿದ ಕ್ಷಣವಾಗಿತ್ತು. ಕಾಲದ ಓಟದಲ್ಲಿ ಮುಖಗಳು ಬದಲಾಗಿರಬಹುದು ಬದುಕಿನ ದಾರಿಗಳು ಬೇರೆಯಾಗಿರಬಹುದು ಉದ್ಯೋಗ, ಕುಟುಂಬ, ಜವಾಬ್ದಾರಿಗಳು ಎಲ್ಲರನ್ನೂ ಬೇರೆ ಬೇರೆ ಕಡೆಗೆ ಕರೆದೊಯ್ದಿರಬಹುದು.

ಆದರೆ ಒಂದೇ ಶಾಲೆಯ ಅಂಗಳದಲ್ಲಿ ಬಿತ್ತಿದ ಸ್ನೇಹದ ಬೀಜವೂ, ಗುರುಗಳು ಕಲಿಸಿದ ಅಕ್ಷರದ ಋಣವೂ ಎಂದಿಗೂ ಮಾಸುವುದಿಲ್ಲ ಎಂಬುದನ್ನು ಈ ಸಮ್ಮೇಳನ ಮತ್ತೊಮ್ಮೆ ಸಾರಿತು. 25 ವರ್ಷಗಳ ಬಳಿಕ ಒಂದಾದ ಗೆಳೆಯರ ಕಣ್ಣಲ್ಲಿ ಕಂಡ ಸಂತಸ, ಗುರುಗಳನ್ನು ಕಂಡಾಗ ತುಂಬಿದ ಕಣ್ಣಾಲಿಗಳು ಹಾಗೂ ಹಳೆಯ ಶಾಲೆಯ ನೆನಪುಗಳಲ್ಲಿ ಮೂಡಿದ ನಗು-ಇವೆಲ್ಲವೂ ಈ ಸಮ್ಮೇಳನವನ್ನು ಮರೆಯಲಾಗದ ನೆನಪಿನ ಪುಟವನ್ನಾಗಿಸಿತು.

## ಸ್ವತಃ ರಕ್ತದಾನ ಮಾಡಿ ಅಧಿಕಾರಿಗಳು, ಸಿಬ್ಬಂದಿಗೆ ಪ್ರೇರಣೆ-ಯಾದ ಕೊಪ್ಪಳ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ

**ಸತ್ಯಮಿಥ್ಯ ಸುದ್ದಿಮೂಲ ಕೊಪ್ಪಳ :**
ಕೊಪ್ಪಳ ಜಿಲ್ಲೆಯಾದ್ಯಂತ ಆಯೋಜನೆ ಮಾಡಲಾದ ವಿಶೇಷ ಸ್ವಯಂಪ್ರೇರಿತ ರಕ್ತದಾನ ಶಿಬಿರಕ್ಕೆ ಸೆ. 16ರಂದು ಜಿಲ್ಲಾಡಳಿತ ಭವನದಲ್ಲಿ ರಿಬ್ಬನ್ ಕತ್ತರಿಸುವ ಮೂಲಕ ಅಧಿಕೃತ ಚಾಲನೆ ನೀಡಿದ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಇಟ್ನಾಳ ಅವರು ಸ್ವತಃ ತಾವೇ ರಕ್ತದಾನ ಮಾಡುವ ಮೂಲಕ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತು ಸಾರ್ವಜನಿಕರಿಗೆ ಹಾಗೂ ಯುವ ಸಮುದಾಯಕ್ಕೆ ಪ್ರೇರಣೆಯಾದರು. ರಕ್ತದಾನವು ಜೀವ ಉಳಿಸುವ ಪವಿತ್ರ ಕಾರ್ಯವಾಗಿದ್ದು, ಜಿಲ್ಲೆಯ ಅರ್ಹ ನಾಗರಿಕರು ಮತ್ತು ಯುವಕರು ಸ್ವಯಂಪ್ರೇರಿತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡುವಂತೆ ಅವರು ಇದೆ ವೇಳೆ ಸಲಹೆ ಮಾಡಿದರು.

ಅಪರ ಜಿಲ್ಲಾಧಿಕಾರಿಗಳಿಂದ ರಕ್ತ ದಾನ: ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಸಹ ಬೆಳಗ್ಗೆ ಜಿಲ್ಲಾಡಳಿತ ಭವನದಲ್ಲಿ ರಕ್ತದಾನ ಮಾಡಿದರು. ಇದೆ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಡಾ. ಈಶ್ವರ ಸವಡಿ ಅವರು ಸಹ ರಕ್ತದಾನ ಮಾಡಿದರು. ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಸಹ ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದರು. ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕೊಪ್ಪಳ ಜಿಲ್ಲಾ ಘಟಕ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಈ ವಿಶೇಷ ರಕ್ತದಾನ ಶಿಬಿರ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಸಹಾಯಕ ಆಯುಕ್ತರಾದ ಮಹೇಬೂಬ್ ಜೀಲಾನಿ ಖುರೇಶಿ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ. ಪ್ರಕಾಶ ವಿ., ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಎ.ಶಶೀಧರ, ಸರ್ಕಾರಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರು ಹಾಗೂ ಕೊಪ್ಪಳ ಜಿಲ್ಲಾಧ್ಯಕ್ಷರಾದ ನಾಗರಾಜ ಜುಮ್ಮಣ್ಣನವರ, ತಾಲ್ಲೂಕ ಆರೋಗ್ಯಾಧಿಕಾರಿ ಡಾ. ವೆಂಕಟೇಶ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ವೈದ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

**ಸತ್ಯಮಿಥ್ಯ ಸುದ್ದಿಮೂಲ ಕೊಪ್ಪಳ :**
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗು ಜಿಲ್ಲಾ ಉಸ್ತುವಾರಿ



ಸಚಿವರಾದ ಶಿವರಾಜ ತಂಗಡಗಿ ಅವರು ಸೆಪ್ಟೆಂಬರ್ 17 ರಂದು ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಸಚಿವರು ಸೆ. 16ರ ಸಂಜೆ 5.30 ಗಂಟೆಗೆ ಮೈಸೂರಿನಿಂದ ರಸ್ತೆ ಮೂಲಕ ನಿರ್ಗಮಿಸಿ, ರಾತ್ರಿ 10.30 ಗಂಟೆಗೆ ಕೊಪ್ಪಳಕ್ಕೆ ಆಗಮಿಸಿ, ವಾಸ್ತವ್ಯ ಹೂಡಲಿದ್ದಾರೆ. ಸೆ. 17ರಂದು ಬೆಳಿಗ್ಗೆ 9 ಗಂಟೆಗೆ ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ 79ನೇ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಸಮಾರಂಭದಲ್ಲಿ ಪಾಲ್ಗೊಂಡು ಧ್ವಜಾರೋಹಣ ನೆರವೇರಿಸಲಿದ್ದಾರೆ.

ನಂತರ ಸಚಿವರು ಅಂದು ಮಧ್ಯಾಹ್ನ 2.30 ಗಂಟೆಗೆ ಕೊಪ್ಪಳದಿಂದ ಮಂಗಳೂರು ಜಿಲ್ಲೆಯ ಕಡೆಗೆ ಪ್ರಯಾಣ ಬೆಳಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಳೆ ಕೈಕೊಟ್ಟರೆ ರೈತರ ಬದುಕೇ ಕಂಗಾಲು

**ಸಚಿನ ಆರ್. ಜಾಧವ ಬಾಗಲಕೋಟೆ**
ಮಳೆಗಾಲದ ದಿನಗಳಾಗಿದ್ದರೂ ವರುಣನ ಕೃಪೆ ಕಾಣಿಸದೆ, ಆಕಾಶದಲ್ಲಿ ಮೋಡ ಕವಿದರೂ ಮಳೆ ಸುರಿಯದಿರುವುದು ಬಾಗಲಕೋಟೆ ಭಾಗದ ರೈತರ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ. ಒಂದೆಡೆ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದ್ದರೆ, ಮತ್ತೊಂದೆಡೆ ಮಳೆಯ ನಿರೀಕ್ಷೆಯಲ್ಲಿ ಹೊಲದಲ್ಲಿನ ಬೆಳೆಗಳು ನೀರಿಗಾಗಿ ಪರದಾಡುವಂತಾಗಿದೆ.

**ಸಾಲು ಸಾಲು ಸಮಸ್ಯೆಗಳು:** ಹೆಚ್ಚಿದ ಕೃಷಿ ವೆಚ್ಚ: ಮುಂಗಾರು ಆರಂಭದಲ್ಲಿ ಉತ್ತಮ ಮಳೆಯ ನಿರೀಕ್ಷೆಯಲ್ಲಿ ಸಾವಿರಾರು ರೂಪಾಯಿ ಖರ್ಚು ಮಾಡಿ ಬಿತ್ತನೆ ಮಾಡಲಾಗಿತ್ತು. ಬೀಜ, ರಸಗೊಬ್ಬರ, ಕೀಟನಾಶಕ, ಔಷಧಿ, ಕೃಷಿ ಯಂತ್ರೋಪಕರಣ ಹಾಗೂ ಕೂಲಿ ಸೇರಿದಂತೆ ಪ್ರತಿ ಹಂತದಲ್ಲೂ ವೆಚ್ಚ ಹೆಚ್ಚಾಗಿದೆ. ಇದೀಗ ಮಳೆ ಕೈಕೊಟ್ಟಿರುವುದರಿಂದ ಹೂಡಿದ ಬಂಡವಾಳ ಮರಳಿ ಬರುವ ಬಗ್ಗೆ ಆತಂಕ ಎದುರಾಗಿದೆ.

ಬೆಳೆ ಬೆಳವಣಿಗೆ ಕುಂಠಿತ: ಮಣ್ಣಿನಲ್ಲಿ ತೇವಾಂಶ ಕಡಿಮೆಯಾಗಿ ಬೆಳೆಗಳ ಬೆಳವಣಿಗೆ ಕುಂಠಿತಗೊಳ್ಳುತ್ತಿದೆ. ಮೋಡಗಳು ಕವಿದು ಬಂದರೂ ಮಳೆ ಸುರಿಸದೆ ಮರೆಯಾಗುತ್ತಿರುವುದು ರೈತರ ನಿರಾಸೆಗೆ ಕಾರಣವಾಗಿದೆ. ಸಮಯಕ್ಕೆ ಸರಿಯಾಗಿ ಮಳೆ ಬಾರದಿದ್ದರೆ ಇಳುವರಿ ಕಡಿಮೆಯಾಗುವ ಸಾಧ್ಯತೆಯಿದ್ದು, ಸಣ್ಣ ಮತ್ತು ಅತಿ ಸಣ್ಣ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಸಾಲದಹೊರೆ: ಬಿತ್ತನೆಯನಂತರವೂ ರಸಗೊಬ್ಬರ, ಔಷಧಿ ಹಾಗೂ ಕಳೆ ನಿಯಂತ್ರಣಕ್ಕೆ ಹಣ ವ್ಯಯಿಸಬೇಕಾಗಿದೆ. ಇಷ್ಟೆಲ್ಲಾ ಮಾಡಿದ ನಂತರವೂ ಬೆಳೆ ಕೈಕೊಟ್ಟರೆ ಶ್ರಮ ಹಾಗೂ ಬಂಡವಾಳ ಎರಡೂ ವ್ಯರ್ಥವಾಗಿ, ಮುಂದಿನ



ಹಂಗಾಮಿಗೆ ಹಣ ಹೊಂದಿಸುವುದೇ ಕಷ್ಟವಾಗಲಿದೆ. ಇದು ಕೃಷಿಯನ್ನೇ ನೆಚ್ಚಿಕೊಂಡ ಕುಟುಂಬಗಳ ಮೇಲೆ ನೇರ ಪರಿಣಾಮ ಬೀರಲಿದೆ.

**ಮಳೆಗಾಗಿ ಕಾಯುತ್ತಿರುವ ಅನ್ನದಾತ:** ನೀರಾವರಿ ಸೌಲಭ್ಯವಿರುವ ರೈತರು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ನೀರಾವರಿ ಇಲ್ಲದ ರೈತರಿಗೆ ಮಳೆಯೇ ಏಕೈಕ ಆಸರೆಯಾಗಿದ್ದು, ಪ್ರತಿದಿನ ಆಕಾಶದತ್ತ ನೋಡುವುದು ಅನಿವಾರ್ಯವಾಗಿದೆ. ಮಳೆ ಇನ್ನೂ ವಿಳಂಬವಾದರೆ ಪರಿಸ್ಥಿತಿ ಹದಗೆಡಲಿದ್ದು, ಕೃಷಿ ಇಲಾಖೆ ಅಧಿಕಾರಿಗಳು ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿ ಹೊಲಗಳ ವಾಸ್ತವ ಸ್ಥಿತಿ ಪರಿಶೀಲಿಸಬೇಕು ಎಂಬುದು ರೈತರ ಆಗ್ರಹವಾಗಿದೆ.

**ತಕ್ಷಣದ ಸಮೀಕ್ಷೆ ಹಾಗೂ ಪರಿಹಾರಕ್ಕೆ ಪಟ್ಟು:** ಮಳೆ ಕೊರತೆಯಿಂದ ಬೆಳೆ ಹಾನಿಯಾದಲ್ಲಿ ಸರ್ಕಾರ ಕಾಗದದ ಮೇಲಿನ ಸಮೀಕ್ಷೆಗೆ ಸೀಮಿತವಾಗದೆ, ನೇರವಾಗಿ ಹೊಲಗಳಿಗೆ ತೆರಳಿ ವಾಸ್ತವ ಹಾನಿಯ ಪ್ರಮಾಣವನ್ನು ದಾಖಲಿಸಬೇಕು. ನಿಯಮಾನುಸಾರ ಸೂಕ್ತ ಬೆಳೆ ಪರಿಹಾರ, ಅಗತ್ಯ ಕೃಷಿ ನೆರವು ಹಾಗೂ ಮುಂದಿನ ಹಂಗಾಮಿಗೆ ಸಹಾಯಧನ ಒದಗಿಸಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

"ಸಾವಿರಾರು ರೂಪಾಯಿ ಖರ್ಚು ಮಾಡಿ ಬಿತ್ತನೆ ಮಾಡಿದ್ದೇವೆ. ಈಗ ಮಳೆ ಕೈಕೊಟ್ಟರೆ ನಮ್ಮ ಶ್ರಮ ಹಾಗೂ ಹಣ ಎರಡೂ ನಷ್ಟವಾಗುತ್ತದೆ. ಬೆಳೆ ಹಾನಿಯಾದರೆ ಸರ್ಕಾರ ವಿಳಂಬ ಮಾಡದೆ ಸಮೀಕ್ಷೆ ನಡೆಸಿ ಸೂಕ್ತ ಪರಿಹಾರ ನೀಡಬೇಕು. ರೈತರ ಸಂಕಷ್ಟವನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು" ಎಂದು ರೈತರು ಮನವಿ ಮಾಡಿದ್ದಾರೆ.

ಪರಿಸ್ಥಿತಿ ಕೈಮೀರುವ ಮುನ್ನ ಸಂಬಂಧಿಸಿದ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮ ಕೈಗೊಂಡು ಅಗತ್ಯ ಮಾರ್ಗದರ್ಶನ ಮತ್ತು ನೆರವು ನೀಡಬೇಕಾಗಿದೆ. ರೈತನ ಹೊಲ ಉಳಿದರೆ ಮಾತ್ರ ಕೃಷಿ ಉಳಿಯುತ್ತದೆ; ಕೃಷಿ ಉಳಿದರೆ ಮಾತ್ರ ಗ್ರಾಮೀಣ ಬದುಕು ಸುಸ್ಥಿರವಾಗುತ್ತದೆ.

## ದೇವಲ ಗಾಣಗಾಪುರದ ಯತಿರಾಜ ಶಾಲೆಯ ಬಾಲಕ-ಬಾಲಕಿಯರ ತಂಡಕ್ಕೆ ಯಶಸ್ಸು!

**ಸತ್ಯಮಿಥ್ಯ ಸುದ್ದಿಮೂಲ ಅಫಜಲಪುರ:**
ಪಟ್ಟಣದ ಹೊರವಲಯದ ತಾಲೂಕು ಕ್ರೀಡಾಂಗಣದಲ್ಲಿ ಇತ್ತೀಚೆಗೆ ಆಯೋಜಿಸಲಾಗಿದ್ದ ಅಫಜಲಪುರ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ದೇವಲ ಗಾಣಗಾಪುರದ ಶ್ರೀ ಯತಿರಾಜ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಅಭೂತಪೂರ್ವ ಸಾಧನೆ ಮಾಡಿದ್ದಾರೆ. ಪಂದ್ಯಾವಳಿಯಲ್ಲಿ ಶಾಲೆಯ ಬಾಲಕ ಮತ್ತು ಬಾಲಕಿಯರ ಎರಡೂ ಖೋ ಖೋ ತಂಡಗಳು ಪ್ರಥಮ ಸ್ಥಾನ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿವೆ.

24 ನೇ ಬಾರಿಗೆ ತಾಲೂಕು ಮಟ್ಟದ ಚಾಂಪಿಯನ್: ಕ್ರೀಡಾ ಸೌಲಭ್ಯಗಳ ಕೊರತೆಯ ನಡುವೆಯೂ ಶಾಲೆಯ ದೈಹಿಕ ಶಿಕ್ಷಕರಾದ ರಾಜು ವಾಗೋರೆ ಅವರ ಶಿಸ್ತುಬದ್ಧ ತರಬೇತಿ ಹಾಗೂ ನಿರಂತರ ಮಾರ್ಗದರ್ಶನದಿಂದ ವಿದ್ಯಾರ್ಥಿಗಳು ಈ ಕ್ರೀಡಾ ಸಾಧನೆ ಮೆರೆದಿದ್ದಾರೆ.

**ಖೋ ಖೋ ವಿಭಾಗ:** ಶಾಲೆಯ ಬಾಲಕ ಹಾಗೂ ಬಾಲಕಿಯರ ತಂಡಗಳು ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ. 24ನೇ ಬಾರಿ ಜಯಭೇರಿ ಬಾರಿಸಿವೆ. ಜಿಲ್ಲಾ ಮತ್ತು ರಾಜ್ಯ ಮಟ್ಟ: ಶಾಲೆಯು 18ನೇ ಬಾರಿ ಜಿಲ್ಲಾ ಮಟ್ಟದ ಪಂದ್ಯಾವಳಿಗೆ ಅರ್ಹತೆ ಪಡೆದಿದ್ದು, ಈ ಹಿಂದೆ ಹಲವು ಬಾರಿ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲೂ ಭಾಗವಹಿಸಿ ಊರಿಗೆ ಕೀರ್ತಿ ತಂದಿದೆ.

ಶಾಲೆಯ ಬಾಲಕ ಮತ್ತು ಬಾಲಕಿಯರ ಖೋ ಖೋ ತಂಡದ ಈ ಸಾಧನೆಗೆ ಶಾಲೆಯ ಆಡಳಿತ ಮಂಡಳಿ, ಮುಖ್ಯ ಶಿಕ್ಷಕರು, ದೈಹಿಕ ಶಿಕ್ಷಕ ರಾಜು ವಾಗೋರೆ ಹಾಗೂ ಸಮಸ್ತ ಶಿಕ್ಷಕ ವೃಂದದವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದೇ ಕ್ರೀಡಾಕೂಟದ ಉದ್ದ ಜಿಗಿತ ಸ್ಪರ್ಧೆಯಲ್ಲಿ ಶಾಲೆಯ ವಿದ್ಯಾರ್ಥಿ ಭರತ್ ಎಲ್ಲಪ್ಪ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ಮುಂಬರುವ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲೂ ಖೋ ಖೋ ತಂಡದ ಬಾಲಕ-ಬಾಲಕಿಯರು ಹಾಗೂ ಉದ್ದ ಜಿಗಿತದಲ್ಲಿ ಆಯ್ಕೆಯಾದ ಭರತ್ ಎಲ್ಲಪ್ಪ ಅತ್ಯುತ್ತಮ ಪ್ರದರ್ಶನ ನೀಡಿ ಶಾಲೆಗೆ ಗೆಲುವು ತರಲಿ ಎಂದು ಶಾಲಾ ಮಂಡಳಿ ಹಾಗೂ ಊರಿನ ಪ್ರಮುಖರು ಶುಭ ಹಾರೈಸಿದ್ದಾರೆ



ಸತ್ಯಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

SATY MITHI
Kannada Daily Morning

# ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ –2026

**ಸತ್ಯಮಿಥ್ಯ ಸುದ್ದಿಮೂಲ ಗದಗ :**
ಗದಗ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬಕಲ್ಯಾಣಇಲಾಖೆ,ಜಿಲ್ಲಾಮಾನಸಿಕಆರೋಗ್ಯಕಾರ್ಯಕ್ರಮ, ಕೆ. ಹೆಚ್ ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ತಾಲೂಕಾ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ, ಹಾಗೂ ಡಿ.ಜಿ.ಎಂ ಆಯುರ್ವೇದಿಕ ವೈದ್ಯಕೀಯ ಮಹಾವಿದ್ಯಾಲಯ ಗದಗ. ಇವರುಗಳ ಸಂಯುಕ್ತ ಆಶ್ರಯದಲ್ಲಿ. ಬುಧವಾರ ಡಿ.ಜಿ.ಎಂ ಆಯುರ್ವೇದಿಕ ವೈದ್ಯಕೀಯ ಮಹಾವಿದ್ಯಾಲಯ ಗದಗದಲ್ಲಿ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ–2026 ರ ಅಂಗವಾಗಿ ಕಾರ್ಯಕ್ರಮ ಜರುಗಿತು,

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಸಿ.ಎಸ್. ಶಿವನಗೌಡ್ರ ಕಾರ್ಯಕ್ರಮ ಉದ್ಘಾಟಿಸಿಮಾತನಾಡುತ್ತಾಇತ್ತೀಚಿನದಿನಗಳಲ್ಲಿಆತ್ಮಹತ್ಯೆಪ್ರಕರಣಗಳು ಹೆಚ್ಚು ಕಂಡು ಬರುತ್ತಿದ್ದು. ಅದರಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಕಂಡು ಬರುತ್ತಿರುವುದು ಕಳವಳಕಾರಿಯಾಗಿದೆ ಎಂದು ಹೇಳಿ ಜೀವನ ಅತ್ಯಮೂಲ್ಯವಾದುದು ಹಾಗೂ ಆತ್ಮಹತ್ಯೆಗಳನ್ನು ತಡೆಗಟ್ಟುವಲ್ಲಿ ಯಾರು ಪ್ರಯತ್ನಿಸಿ ಯಶಸ್ವಿಯಾಗುತ್ತಾರೋ ಅವರು ದೇವರ ಕೆಲಸವನ್ನು ಮಾಡಿದ ಹಾಗೆ ಎಂದು ತಿಳಿಸಿ ಎಲ್ಲರೂ ಆತ್ಮಹತ್ಯೆಗಳನ್ನು ತಡೆಗಟ್ಟುವಲ್ಲಿ ಶ್ರಮಿಸಬೇಕೆಂದು ತಿಳಿಸಿದರು. ಹಾಗೂ ಆತ್ಮಹತ್ಯೆಗೆ ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳು ಅಂದರೆ ಮಾನವ ಸಂಘಜೀವವನ್ನು ತೊರೆದು ಏಂಕಾಗಿತನದ ಕಡೆ ಹೋಗುತ್ತಿರುವುದು ಮುಖ್ಯ ಕಾರಣ ಎಂದು ತಿಳಿಸಿದರು. ಆತ್ಮಹತ್ಯೆ ಆಲೋಚನೆಗಳು ಬಂದಂತಹ ಸಮಯದಲ್ಲಿ ಚಿಕಿತ್ಸೆ ಹಾಗೂ ಆಪ್ತ ಸಮಾಲೋಚನೆಯ ಸೇವೆ ಪಡೆಯಿರಿ ಹಾಗೂ ಟೆಲಿ–ಮನಸ್ ಉಚಿತ ಸಹಾಯವಾಣಿ ಸಂಖ್ಯೆ 14416 ಸಹಾಯ ಪಡೆಯಲು ತಿಳಿಸಿದರು. ಅಲ್ಲದೆ ಹದಿಹರೆಯದ ವಯಸ್ಸಿನ ಮಕ್ಕಳ ಕಡೆ ಹೆಚ್ಚು ಗಮನವನ್ನು ನೀಡುವುದು ಅವಶ್ಯಕ ಎಂದು ತಿಳಿಸಿ ಆತ್ಮಹತ್ಯೆ ತಡೆಗಟ್ಟುವಲ್ಲಿ ಅರಿವು ಮೂಡಿಸುವುದು ಎಲ್ಲರ ಜವಾಬ್ದಾರಿ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಎಸ್ ಎಸ್ ನೀಲಗುಂದ ಕರ ಪತ್ರಗಳನ್ನು ಬಿಡುಗಡೆಗೊಳಿಸಿ ವಿಶ್ವದಲ್ಲಿ ಪ್ರತಿ 40 ಸೆಕೆಂಡಿಗೊಂದು ಆತ್ಮಹತ್ಯೆ ಅಂದರೆ ಪ್ರತಿ 7 ಲಕ್ಷಕ್ಕೂ ಹೆಚ್ಚು ಜನ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂದು ಹೇಳಿದರು. ನಮ್ಮ ದೇಶದಲ್ಲಿ 1 ಲಕ್ಷಕ್ಕೂಹೆಚ್ಚುಜನ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಆತ್ಮಹತ್ಯೆಗೆ ಹಲವಾರು ಕಾರಣಗಳಿದ್ದು ಅದರಲ್ಲಿ ಕೌಟುಂಬಿಕ ಸಮಸ್ಯೆ, ಪ್ರೀತಿ ಪ್ರೇಮಕ್ಕೆಸಂಬಂಧಿಸಿದ ಸಮಸ್ಯೆ, ಸಮಸ್ಯೆ ನಿಭಾಯಿಸಲು ಬೇಕಾದ ಜೀವನ ಕೌಶಲ್ಯಗಳ ಕೊರತೆಯಿಂದ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂದು ತಿಳಿಸಿದರು.

ಈ ಕಾರ್ಯಕ್ರಮದ ಅತಿಥಿಗಳಾಗಿ ಆಗಮಿಸಿದ ಜಿಲ್ಲಾ ಕುಷ್ಠರೋಗ ನಿರ್ಮೂಲನ ಅಧಿಕಾರಿಗಳು ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ. ಜಿ.ಎಸ್ ಪಲ್ಲೆದ ಮಾತನಾಡಿ ಎಲ್ಲ ಗಣ್ಯ ಮಾನ್ಯರಿಗೆ ಸ್ವಾಗತಿಸಿ ಪ್ರಾಸ್ತಾವಿಕ ನುಡಿಯಲ್ಲಿ ಪ್ರತಿ ವರ್ಷ ಸೆಪ್ಟೆಂಬರ್ 10 ರಂದು ವಿಶ್ವದಾದ್ಯಂತ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆಯನ್ನು 2003 ರಿಂದ ಆಚರಣೆ ಮಾಡಲಾಗುತ್ತದೆ ಎಂದು ಹೇಳಿದರು. ಹಾಗೂ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆಯ ಉದ್ದೇಶವನ್ನು ತಿಳಿಸಿದರು.

ಅತಿಥಿ ಉಪನ್ಯಾಸಕರಾಗಿ ಆಗಮಿಸಿದ ಡಾ. ಶ್ಯಾಮಸುಂದರ ಬಾಲೇಹೊಸುರ ಮನೋ ವೈದ್ಯರು ಮನೋವೈದ್ಯಕೀಯ ವಿಭಾಗ ಕೆ. ಹೆಚ್ ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರು ಉಪನ್ಯಾಸದಲ್ಲಿಆತ್ಮಹತ್ಯೆಯವ್ಯಾಖ್ಯಾನ,ಕಾರಣಹಾಗೂತಡೆಗಟ್ಟುವಲ್ಲಿ ಕೈಗೊಳ್ಳಬೇಕಾದ ಕಾರ್ಯಗಳ ಕುರಿತು ವಿವರವಾಗಿ ವಿದ್ಯಾರ್ಥಿಗಳಿಗೆ ತಿಳಿಸಿ. ಈ ನಿಟ್ಟಿನಲ್ಲಿ ಎಲ್ಲ ವಿದ್ಯಾರ್ಥಿಗಳು ಅರಿವು ಮೂಡಿಸುವಲ್ಲಿ ಕಾರ್ಯಗತವಾಗಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಡಾ. ಎಸ್.ಎಮ್ ಬೆಳವಡಿ ಪ್ರಾಂಶುಪಾಲರು ಡಿ.ಜಿ.ಎಂ ಆಯುರ್ವೇದಿಕ ವೈದ್ಯಕೀಯ ಮಹಾವಿದ್ಯಾಲಯ ಇವರು ಅಧ್ಯಕ್ಷೀಯ ನುಡಿಯಲ್ಲಿ ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಆತ್ಮಹತ್ಯೆಗಳು ಹೆಚ್ಚಾಗುತ್ತಿದ್ದು ಇಂತಹ ಜಾಗೃತಿ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಅತ್ಯವಶ್ಯಕ ಎಂದು ತಿಳಿಸಿದರು. ಹಾಗೂ ವಿದ್ಯಾರ್ಥಿಗಳು ಸಮಾಜದಲ್ಲಿ ಈ ಕುರಿತು ಅರಿವು ಮೂಡಿಸುವುದು ಅವಶ್ಯಕ ಎಂದು ತಿಳಿಸಿದರು. ಕಾರ್ಯಕ್ರಮವನ್ನು ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಆಯುರ್ವೇದಿಕ ವಿಷಯದಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣಗಳು ಏನು ಹಾಗೂ ಅದಕ್ಕೆ ಪರಿಹಾರ ಏನು ಎಂಬುದನ್ನು ನಮ್ಮ ಆಯುರ್ವೇದಿಕ ವಿಷಯದಲ್ಲಿತಿಳಿದುಕೊಂಡುರೋಗಿಗಳಿಗೆಚಿಕಿತ್ಸೆನೀಡಲುತಿಳಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ರೂಪಸೇನ ಚವ್ಹಾಣ ಇವರು ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಕಾರ್ಯಕ್ರಮದಲ್ಲಿ ಆರೋಗ್ಯ ಮೆಲ್ವೀಚಾರಕರುಆರ್ ಎಸ್ ಬಡ್ಡಿ,ತಾಲೂಕಾಆರೋಗ್ಯಶಿಕ್ಷಣಾಧಿಕಾರಿ ರಾಜೇಂದ್ರ ಗಡಾದ. ಕ್ಲಿನಿಕಲ್ ಸೈಕಾಲಜಿಸ್ಟ್ ಎಂ ಸಿ ಶ್ರೀಧರ. ಮತ್ತು ಸೈಕ್ಯಾಟ್ರಿಕ್ ಸೋಶಿಯಲ್ ವರ್ಕರ. ವಿನಾಯಕ .ಸಿ. ಕಾಳೆ ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಗಳು ಮತ್ತು ಡಿ.ಜಿ.ಎಂ ಆಯುರ್ವೇದಿಕ ವೈದ್ಯಕೀಯ ಮಹಾವಿದ್ಯಾಲಯ ಗದಗದ ವಿದ್ಯಾರ್ಥಿಗಳು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು.

ಕುಮಾರಿ ಸಾಧನಾ ಮತ್ತು ಮಾನಸಾ ಪ್ರಾರ್ಥಿಸಿದರು. ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀ ಎಸ್. ಡಿ ಬೆನ್ನೂರ ಕಾರ್ಯಕ್ರಮ ನಿರೂಪಿಸಿದರು. ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಸ್ ಎಫ್ ಹನಕನಹಳ್ಳಿ ವಂದಿಸಿದರು.



# ಬಸವ ಬಾಲ ಭಾರತಿ ಶಾಲೆಗೆ ಖೋಖೋ ಚಾಂಪಿಯನ್‌ಷಿಪ್: ತಾಲ್ಲೂಕು ಮಟ್ಟಕ್ಕೆ ಆಯ್ಕೆ

**ಸತ್ಯಮಿಥ್ಯ ಸುದ್ದಿಮೂಲ ಢವಳಗಿ:**
ಇಲ್ಲಿನ ಬಸವ ಬಾಲ ಭಾರತಿ ಶಾಲೆಯಲ್ಲಿ ಸೆಪ್ಟೆಂಬರ್ 12 ಶನಿವಾರದಂದು ನಡೆದ ಢವಳಗಿ ಹೋಬಳಿ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟದಲ್ಲಿ ಬಸವ ಬಾಲ ಭಾರತಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡುವ ಮೂಲಕ ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಗಂಡು ಮಕ್ಕಳ ವಿಭಾಗದ ಖೋ–ಖೋ ಪಂದ್ಯಾವಳಿಯ ಫೈನಲ್ ಆಟದಲ್ಲಿ ಮಡಿಕೇಶ್ವರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿರುದ್ಧ ಜಯಗಳಿಸಿದ ಬಸವ ಬಾಲ ಭಾರತಿ ಶಾಲೆಯ ತಂಡವು ತಾಲ್ಲೂಕು ಮಟ್ಟದ ಕ್ರೀಡಾಕೂಟಕ್ಕೆ ಅರ್ಹತೆ ಪಡೆದುಕೊಂಡಿದೆ. ಅಲ್ಲದೆ, ಹೆಣ್ಣು ಮಕ್ಕಳ ವಿಭಾಗದ ಉದ್ದ ಜಿಗಿತ ಸ್ಪರ್ಧೆಯಲ್ಲಿ ಸಾಕ್ಷಿ



ಜಮಾದರಖಾನಿ ಪ್ರಥಮ ಸ್ಥಾನ ಹಾಗೂ 400 ಮೀಟರ್ ಓಟದ ಸ್ಪರ್ಧೆಯಲ್ಲಿ ಗುರುದೇವಿ ಅಡ್ಡೋಡ್ಡಗಿ ಪ್ರಥಮ ಸ್ಥಾನವನ್ನು ಗಳಿಸಿ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಸಾಧನೆಗೈದ ಎಲ್ಲಾ ವಿದ್ಯಾರ್ಥಿಗಳಿಗೆ ಶಾಲೆಯ ಮುಖ್ಯ ಗುರುಗಳಾದ ರಮೇಶ ಮೂಲಿಮನಿ, ಸಹ ಶಿಕ್ಷಕರು ಹಾಗೂ ಸಂಸ್ಥೆಯ ಆಡಳಿತ ಮಂಡಳಿಯವರು ಶುಭ ಹಾರೈಸಿದರು. ವಿಜೇತ ವಿದ್ಯಾರ್ಥಿಗಳು ಪ್ರಶಸ್ತಿ ಪತ್ರ ಹಾಗೂ ಶಿಲ್ಡ್‌ಗಳೊಂದಿಗೆ ಶಿಕ್ಷಕರ ಜೊತೆ ಫೋ–ಟೋ ತೆಗೆಸಿಕೊಂಡು ತಮ್ಮ ಸಂಭ್ರಮವನ್ನು ವ್ಯಕ್ತಪಡಿಸಿದರು.

# ಮನುಷ್ಯ ಸದ್ಗುರುವಿನ ಕೃಪೆಗೆ ಪಾತ್ರರಾಗಬೇಕು: ಡಾ.ಶಿವಾನಂದ ಭಾರತಿ ಶ್ರೀ

**ಸತ್ಯಮಿಥ್ಯ ಸುದ್ದಿಮೂಲ ಬೆಟಗೇರಿ:**
ಸುಜ್ಞಾನದ ಬೆಳಕು ನೀಡುವ ಶಕ್ತಿ ಸದ್ಗುರುವಿಗಿದೆ. ಮನುಷ್ಯ ಸದ್ಗುರುವಿನ ಕೃಪೆಗೆ ಪಾತ್ರರಾಗಬೇಕು. ಸತ್ಕಾರ್ಯಗಳಿಗೆ ದಾನ ಮಾಡಿ ತಮ್ಮ ಜೀವನ ಸಾರ್ಥಕ ಮಾಡಿಕೊಳ್ಳಬೇಕು ಎಂದು ಇಂಚಲ ಸಾಧು ಸಂಸ್ಥಾನ ಮಠದ ಡಾ. ಶಿವಾನಂದ ಭಾರತಿ ಮಹಾಸ್ವಾಮಿಜಿ ಹೇಳಿದರು.

ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದ ಗಜಾನನ ವೇದಿಕೆಯಲ್ಲಿ ಸೆ.15ರಂದು ನಡೆದ 42ನೇ ಸತ್ಸಂಗ ಸಮ್ಮೇಳನದ ದಿವ್ಯಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಸದ್ಗುರುವಿನ ಕೃಪೆಗೆ ಪಾತ್ರರಾಗಬೇಕಾದರೆ ಒಳ್ಳೆಯ ಕಾರ್ಯಕ್ಕೆ ದಾನ, ಧರ್ಮ ಮಾಡಬೇಕು. ದಾನ, ಧರ್ಮ ಮಾಡಿದವರಿಗೆ ಪುಣ್ಯ ಬರುತ್ತದೆ. ಸದ್ಗುರುವಿನ ಮೇಲೆ ಅಪಾರ ನಂಬಿಕೆ, ಪ್ರೀತಿವಿರಬೇಕು ಎಂದರು.

ಸೆ.15ರಂದು ಪ್ರಾತ: ಕಾಲ ಬ್ರಾಹ್ಮೀ ಮೂಹೂರ್ತದಲ್ಲಿ ಶಿವನಾಮ ಸ್ಮರಣೆ ಬಳಿಕ ರಾತ್ರಿ 8 ಗಂಟೆಗೆ ಇಂಚಲದ ಸಾಧು ಸಂಸ್ಥಾನಮಠದ ಸದ್ಗುರು ಡಾ.ಶಿವಾನಂದ ಭಾರತಿ ಮಹಾಸ್ವಾಮಿಜಿ ಘನ ಅಧ್ಯಕ್ಷತೆಯಲ್ಲಿ ಪ್ರವಚನ ನಡೆಯಿತು. ಹಳಕಟ್ಟಿಯ ನಿಜಗುಣ ಸ್ವಾಮಿಜಿ, ಗದಗ ಮಹಿಳಾ ಆಧ್ಯಾತ್ಮ ವಿದ್ಯಾಶ್ರಮದ ಡಾ. ನೀಲಮ್ಮಾತಾಯಿ(ಅಸುಂಡಿ), ಇಂಚಲದ ಪೂರ್ಣಾನಂದ ಭಾರತಿ ಸ್ವಾಮಿಜಿ, ಮಲ್ಲಾಪೂರ(ಕೆ.ಎನ್)ಚಿದಾನಂದ ಸ್ವಾಮಿಜಿ, ಹುಣಶ್ಯಾಳ(ಪಿ.ಜಿ) ನಿಜಗುಣ ದೇವರು, ತೊಂಡಿಕಟ್ಟಿಯ ಅಭಿನವ ವೆಂಕಟೇಶ್ವರ ಮಹಾರಾಜರು, ಜೋಡಕುರುಳಿ ಚಿದ್ಘನಾನಂದ ಭಾರತಿ ಸ್ವಾಮೀಜಿ, ಹಡಗಿನಾಳದ ಮಲ್ಲೇಶ ಶರಣರು, ಗದಗದ ಶರಣೆ ಮೈತ್ರಾ ತಾಯಿಯವರಿಂದ ನೋಡಿ ಕೆಲರಂ ಮಾತನಾಡಿ ಕೆಲರಂ ಎಂಬ ವಿಷಯದ ಮೇಲೆ ಪ್ರವಚನ, ಹೇಳಿದರು. ಕರಿಕಟ್ಟಿ ಗುರುನಾಥ ಶಾಸ್ತ್ರೀಗಳಿಂದ ಕೀರ್ತನೆ ಜರುಗಿತು.

ಸ್ಥಳೀಯ ಶರಣ ಅಡಿವೆಪ್ಪ ಜೋಗಿ ಹಾಗೂ ಕುಟುಂಬದವರಿಂದ ಮತ್ತು ಅಕ್ಕಿಸಾಗರದ ಮಲ್ಲಪ್ಪ ತಡಸಿ ಹಾಗೂ ಕುಟುಂಬದವರಿಂದ ಡಾ. ಶಿವಾನಂದ ಭಾರತಿ ಶ್ರೀಗಳಿಗೆ ಭಕ್ತಿಯ ತುಲಾಭಾರ ಸೇವೆ, ಕಿರೀಟ ಮಹಾಪೂಜೆ, ಸ್ಥಳೀಯ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಸದ್ಭಕ್ತರಿಂದ ರಾತ್ರಿಶಿವಭಜನೆ, ಶಿವಜಾಗರಣೆ, ಕಲ್ಲೋಳಿಕುಮಾರಿ ವೀಣಾಮಂಟೂರ ಹಾಗೂ ಸಂಗಡಿಗರಿಂದ ಸಂಗೀತ ಸೇವೆ, ಶರಣ ಯಲ್ಲಪ್ಪ ಮೇಳೆನ್ನವರ ಹಾಗೂ ಗ್ರಾಪಂ ಮಾಜಿ ಅಧ್ಯಕ್ಷ ಈಶ್ವರ ಬಳಿಗಾರ ಕುಟುಂಬದವರಿಂದ ಮಹಾಪ್ರಸಾದ ಸೇವೆ ನಡೆಯಿತು. ಚಿಂತಪ್ಪ ಸಿದ್ನಾಳ, ಮಹಾದೇವಪ್ಪ ಹಡಪದ, ಈರಪ್ಪ ದೇಯಣ್ಣವರ, ಈಡಪ್ಪ ರಾಮಗೇರಿ, ಗೌಡಪ್ಪ ಮೇಳೆಣ್ಣವರ, ಬಸಪ್ಪ ತೋಟಗಿ, ನಿಂಗಪ್ಪ ಕಂಬಿ, ಸಿದ್ರಾಮ ಪಡಶೆಟ್ಟಿ, ಫಕೀರಪ್ಪ ಪೇದನ್ನವರ, ಬಸವರಾಜ ನೀಲಣ್ಣವರ, ಈರಪ್ಪ ಮಾಡಲಗಿ, ಶಿವನಗೌಡ ದೇಯಣ್ಣವರ, ಬಸನಗೌಡ ದೇಯಣ್ಣವರ, ಭೀಮನಾಯ್ಕ ನಾಯ್ಕರ, ಸ್ಥಳೀಯ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಸಂತ–ಶರಣರು, ಹರ, ಗುರು, ಚರಮೂರ್ತಿಗಳು, ಗಣ್ಯರು, ಆಧ್ಯಾತ್ಮ ಪ್ರವಚನ ಶ್ರವಣಾಸಕ್ತರು, ಸ್ಥಳೀಯ ಈಶ್ವರ ಭಜನಾ ಮಂಡಳಿ ಪದಾಧಿಕಾರಿಗಳು, ಸದಸ್ಯರು, ಗ್ರಾಮಸ್ಥರು, ಮತ್ತಿತರರು ಇದ್ದರು. ಬಸವರಾಜ ಪಣದಿ ಕಾರ್ಯಕ್ರಮ ರೂಪಿಸಿ ಕೊನೆಗೆ ವಂದಿಸಿದರು.



# ಕ್ರೀಡೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕ: ಎ.ಬಿ.ಹೊಸಮನಿ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ನಗರದ ಕರ್ನಾಟಕ ಪಬ್ಲಿಕ್ ಶಾಲೆ ನಂ.1ರ ಆವರಣದಲ್ಲಿ ಗಜೇಂದ್ರಗಡ ವಲಯ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟ ಬುಧವಾರ ಉತ್ಸಾಹಭರಿತ ವಾತಾವರಣದಲ್ಲಿ ನಡೆಯಿತು.

ಕ್ರೀಡಾಕೂಟವನ್ನು ಎಸ್‌ಡಿಎಂಸಿ ಅಧ್ಯಕ್ಷ ವಿಠ್ಠಲ ಬಂಡಿವಡ್ಡರ ಉದ್ಘಾಟಿಸಿದರು. ಬಳಿಕ ದಕ್ಷಿಣ ವಲಯದ ಸಿಆರ್‌ಪಿ ಆರ್.ಜಿ. ಮ್ಯಾಕಲ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ಜತೆಗೆ ದೈಹಿಕ ಮತ್ತು ಮಾನಸಿಕ ಸದೃಢತೆಗೂ ಆದ್ಯತೆ ನೀಡುವುದು ಅಗತ್ಯವಾಗಿದೆ. ಕ್ರೀಡೆಗಳು ಮಕ್ಕಳಲ್ಲಿ ಶಿಸ್ತು, ಸಮಯಪಾಲನೆ, ಆತ್ಮವಿಶ್ವಾಸ, ನಾಯಕತ್ವ ಗುಣ ಹಾಗೂ ಒಗ್ಗಟ್ಟಿನ ಮನೋಭಾವ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಹೊರತರುವಲ್ಲಿ ಇಂತಹ ಕ್ರೀಡಾಕೂಟಗಳು ಪ್ರಮುಖ ವೇದಿಕೆಯಾಗಿವೆ ಎಂದು ಹೇಳಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ರಜಾಕ ಹುನಗುಂದ ಮಾತನಾಡಿ, ಪಠ್ಯಾಧಾರಿತ ಶಿಕ್ಷಣದ ಜತೆಗೆ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೂ ಸಮಾನ ಪ್ರೋತ್ಸಾಹ ದೊರೆಯಬೇಕು. ಗೆಲುವು–ಸೋಲಿಗಿಂತ ಕ್ರೀಡೆಯಲ್ಲಿ ಪಾಲ್ಗೊಂಡು ಕ್ರೀಡಾಸ್ಫೂರ್ತಿಯಿಂದ ಸ್ಪರ್ಧಿಸುವ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸುವುದು ಮುಖ್ಯ. ಇಂತಹ ಕ್ರೀಡಾಕೂಟಗಳಿಂದ ವಿದ್ಯಾರ್ಥಿಗಳಲ್ಲಿ ಪರಸ್ಪರ ಸ್ನೇಹ, ಸಹಕಾರ ಮತ್ತು ಆರೋಗ್ಯಕರ ಸ್ಪರ್ಧಾ ಮನೋಭಾವ ವೃದ್ಧಿಯಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಎಸ್.ಟಿ. ಪೂಜಾರ ಅವರು ಕ್ರೀಡಾಧ್ವಜಾರೋಹಣ ಕಾರ್ಯಕ್ರಮ ನಡಸಿಕೊಟ್ಟರು, ಎಚ್.ಆರ್. ನಿಡಗುಂದಿ ಅವರು ಕ್ರೀಡಾಜ್ಯೋತಿ ಹಾಗೂ ಕ್ರೀಡಾ ಪ್ರತಿಜ್ಞಾವಿಧಿ ಬೋಧಿಸಿದರು. ಕ್ರೀಡಾಜ್ಯೋತಿ ಹಾಗೂ ಕ್ರೀಡಾ ಪ್ರತಿಜ್ಞೆಯೊಂದಿಗೆ ಕ್ರೀಡಾಕೂಟಕ್ಕೆ ಅಧಿಕೃತ ಚಾಲನೆ ನೀಡಲಾಯಿತು . ಬಳಿಕ ಹಿರಿಯ ದೈಹಿಕ ಶಿಕ್ಷಕ ಎಚ್.ಆರ್.ನಿಡಗುಂದಿ ಹಾಗೂ ಎಸ್.ಟಿ.ಪೂಜಾರ ಮಾತನಾಡಿ ಶೈಕ್ಷಣಿಕ ಚಟುವಟಿಕೆಗಳ ಜತೆಗೆ ಕ್ರೀಡೆಗೂ ಆದ್ಯತೆ ನೀಡುವ ಮೂಲಕ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣ ಇಲಾಖೆ ಮುಂದಾಗಿರುವುದು ಇಂತಹ ಕ್ರೀಡಾಕೂಟಗಳಿಂದ ಸ್ಪಷ್ಟವಾಗುತ್ತದೆ. ವಲಯ ಮಟ್ಟದಲ್ಲಿ ಉತ್ತಮ ಸಾಧನೆ ತೋರುವ ವಿದ್ಯಾರ್ಥಿಗಳಿಗೆ ಮುಂದಿನ ಹಂತದ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶ ದೊರೆಯಲಿದೆ.ಮೈದಾನದಲ್ಲಿ ವಿದ್ಯಾರ್ಥಿಗಳ ಕ್ರೀಡಾ ಪ್ರತಿಭೆ, ಚುರುಕುತನ ಹಾಗೂ ಸ್ಪರ್ಧಾತ್ಮಕ ಮನೋಭಾವ ಅತ್ಯಗತ್ಯವಾಗಿದೆ ಎಂದರು.

ಕ್ರೀಡಾಕೂಟದಲ್ಲಿ ಶಾಲೆಯ ಮುಖ್ಯಶಿಕ್ಷಕಿ ಎ.ಬಿ.ಹೊಸಮನಿ, ಕರ್ನಾಟಕ ರಾಜ್ಯ ನೌಕರರ ಸಂಘದ ತಾಲೂಕಾ ಘಟಕದ ಜಂಟಿ ಕಾರ್ಯದರ್ಶಿ ಎಸ್.ಎಸ್.ಪಸಾರದ, ಬಸವರಾಜ ಕಡಬಿನ, ಎಸ್.ಕೆ.ಸರಗಣಾಚಾರಿ, ಮಹೇಶ ಕುರಿ, ಎಸ್.ಆರ್.ಅಂಗಡಿ, ಎಫ್,ಎಫ್,ದೊಡ್ಡಮನಿ, ಬಸವರಾಜ ಅಂಗಡಿ, ಆರ್.ಎಸ್.ಇಟಗಿ, ಶರಣಪ್ಪ ಬಡಿಗೇರ, ವಾಯ್. ಎಚ್.ಪೂಜಾರ, ಜಾಕೀರಹುಸೇನ ಗೋಡೆಕಾರ, ಆರ್.ಕೆ.ಕವಡಿಮಟ್ಟಿ, ಬಿ.ಎಸ್.ಅಣ್ಣಿಗೇರಿ, ಎಮ್. ಯು.ಗೋಡೆಕಾರ, ಮಂಜುನಾಥ ಚಿನ್ನೂರ, ಪ್ರಕಾಶ ಅಂಬೋರೆ, ಎಸ್.ಕೆ.ಹುನಗುಂದ, ಆರ್.ವಿ.ನಿರಂಜನ, ಎಸ್.ಕೆ.ಮಠದ, ಟಿ.ಸುಮಿತ್ರಾ ,ಎಚ್,ವ್ಹಿ.ಕಂಬಳಿ, ಎಸ್.ಎಚ್.ಅರಳಿಗಿಡದ, ಜಿ.ಡಿ.ಕಳ್ಳಿಮನಿ, ಎನ್.ಎ.ಅಮಟೆ,ಬಸವರಾಜ ಹೊಸಗೌಡ್ರ ಸೇರಿದಂತೆ ಅನೇಕರು ಇದ್ದರು.



# ವಿದ್ಯಾಶ್ರೀ ಎಂ. ಪೂಜಾರ ಜಿಲ್ಲಾ ಮಟ್ಟಕ್ಕೆ ಆಯ್ಕೆ

**ಸತ್ಯಮಿಥ್ಯ ಸುದ್ದಿಮೂಲ ಕುಷ್ಟಗಿ:**
ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟವು ಬುಧವಾರ ನಡೆಯಿತು. ಕ್ರೀಡಾಕೂಟದಲ್ಲಿ ತುಮರಿಕೊಪ್ಪ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ಕುಮಾರಿ ವಿದ್ಯಾಶ್ರೀ ಎಂ. ಪೂಜಾರ ಅವರು 200 ಮೀಟರ್ ಓಟ ಹಾಗೂ ಹೈಜಂಪ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿನಿಯ ಈ ಸಾಧನೆಗೆ ಶಾಲೆಯ ಮುಖ್ಯೋಪಾಧ್ಯಾಯರಾದ



ಶ್ರೀ ರವಿ ಕೊಳ್ಳೂರು ಅವರು ಸಂತಸ ವ್ಯಕ್ತಪಡಿಸಿ, ವಿದ್ಯಾಶ್ರೀ ಅವರ ಕ್ರೀಡಾ ಪ್ರತಿಭೆ ಮುಂದಿನ ಹಂತದಲ್ಲಿಯೂ ಉತ್ತಮ ಸಾಧನೆ ಮಾಡಲಿ ಎಂದು ಶುಭ ಹಾರೈಸಿದರು.

ವಿದ್ಯಾಶ್ರೀ ಅವರ ಸಾಧನೆಗೆ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

# ಗೀತಾಂಜಲಿ ಕಿರ್ಲೋಸ್ಕರ್‌ಗೆ ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ

**ಬೆಂಗಳೂರು:** ಫೆಡರೇಶನ್ ಆಫ್ ಕರ್ನಾಟಕ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿತನ್ನ ಸಂಸ್ಥಾಪನ ದಿನದಂದು ಕಿರ್ಲೋಸ್ಕರ್ ಸಿಸ್ಟಮ್ಸ್‌ನ ಅಧ್ಯಕ್ಷೆ ಹಾಗೂ ವ್ಯವಸ್ಥಾಪಕ ನಿರ್ದೇಶಕಿ ಗೀತಾಂಜಲಿ ವಿಕ್ರಮ್ ಕಿರ್ಲೋಸ್ಕರ್ ಅವರಿಗೆ 'ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ'ಯನ್ನು ಪ್ರದಾನ ಮಾಡಿತು. 1999ರಲ್ಲಿ ಈ ಪ್ರಶಸ್ತಿಯನ್ನು ಆರಂಭಿಸಿದ್ದು ಕಿರಣ್ ಮಜುಂದಾರ್–ಶಾ ನಂತರ ಪ್ರಶಸ್ತಿಗೆ ಆಯ್ಕೆಯಾದ ಎರಡನೇ ಮಹಿಳೆಯಾಗಿದ್ದಾರೆ. ಈ ವರ್ಷ ಮಹಿಳಾ ಉದ್ಯಮಿಯೊಬ್ಬರು ಪ್ರಶಸ್ತಿಯನ್ನು ಗೆದ್ದಿರುವುದು ನನಗೆ ಸಂತೋಷತಂದಿದೆ. ಈಏಐಅಖಯಲ್ಲಿ ಉಮಾ ರೆಡ್ಡಿ ಅವರು ಮೊದಲ ಮಹಿಳಾ ಅಧ್ಯಕ್ಷರಾಗಿದ್ದು ಈ ಬದಲಾವಣೆಯು ಸರಿಯಾದದಿಕ್ಕಿನಲ್ಲಿಇಟ್ಟಹೆಜ್ಜೆಯಾಗಿದೆ. ಉದ್ಯೋಗ ಕ್ಷೇತ್ರದಲ್ಲಿ ಲಿಂಗ ಸಮಾನತೆ ಸಾಧಿಸಿದರೆ, ಭಾರತದ ಜಿಡಿಪಿ (ಉಆಕ) ಶೇ. 20ರಷ್ಟು ಹೆಚ್ಚಾಗುತ್ತದೆ ಎಂದು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದರು.




SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114